'ಜನತಾವಾಣಿ'ಯ ಓದುಗರಿಗೆ,
ಏಜೆಂಟರಿಗೆ, ಹಿತೈಷಿಗಳಿಗೆ, ಅಭಿಮಾನಿಗಳಿಗೆ
ದೀಪಾವಳಿ ಹಬ್ಬದ ಶುಭಾಶಯಗಳು.
- ಸಂಪಾದಕರು

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

**ಬಿಡುವು**

ಬಲಿಪಾಡ್ಯಮಿ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ಬಿಡುವು. ಕಾರಣ ನಾಳೆ ಶನಿವಾರದ ಸಂಚಿಕೆ ಪ್ರಕಟವಾಗುವುದಿಲ್ಲ.
- ವ್ಯವಸ್ಥಾಪಕರು

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ದಾವಣಗೆರೆ
ಶುಕ್ರವಾರ, ನವೆಂಬರ್ 05, 2021

ಸಂಪುಟ : 48 ಸಂಚಿಕೆ : 175 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 4.00 www.janathavani.com janathavani@mac.com








**ನಗರ ದೇವತೆಗೆ ಮೊಸರು ಬುತ್ತಿ ಪೂಜೆ**

ದಾವಣಗೆರೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿಗೆ ಗುರುವಾರ ಮೊಸರು ಬುತ್ತಿ ಪೂಜೆ ನೆರವೇರಿಸಲಾಯಿತು. ನವರಾತ್ರಿ ಹಬ್ಬದಲ್ಲಿ 9 ದಿನಗಳ ಕಾಲ ದೇವಿ ರೌದ್ರಾವತಾರ ತಾಳಿದ್ದು, ಶಾಂತಚಿತ್ತಳಾಗಲಿ ಎಂಬ ಕಾರಣಕ್ಕಾಗಿ ದೇವಸ್ಥಾನ ಟ್ರಸ್ಟ್ ವತಿಯಿಂದ ಬುತ್ತಿ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಭಕ್ತರು ದೇವಿ ದರ್ಶನ ಪಡೆದು ಬುತ್ತಿ ಪ್ರಸಾದ ಸ್ವೀಕರಿಸಿದರು.

# ಗಡಿ ಸೌಲಭ್ಯಗಳಿಂದ ಸೈನಿಕ ಸಾಮರ್ಥ್ಯ ಹೆಚ್ಚಳ: ಮೋದಿ

## ನೌಶೇರಾ ವಲಯದಲ್ಲಿ ಸೈನಿಕರೊಂದಿಗೆ ಪ್ರಧಾನಿ ದೀಪಾವಳಿ

ನೌಶೇರ (ಜಮ್ಮು - ಕಾಶ್ಮೀರ), ನ.4 - ಆಧುನಿಕ ಗಡಿ ಮೂಲಭೂತ ಸೌಲಭ್ಯಗಳಿಂದಾಗಿ ದೇಶದ ಸೈನಿಕ ಸಾಮರ್ಥ್ಯ ಹೆಚ್ಚಾಗಲಿದೆ ಎಂದು ಹೇಳಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಗಡಿ ಹಾಗೂ ಕರಾವಳಿ ಪ್ರದೇಶಗಳಲ್ಲಿ ಹೆಚ್ಚಿನ ಸಂಪರ್ಕ ಸೌಲಭ್ಯ ಕಲ್ಪಿಸಲಾಗಿದೆ ಎಂದಿದ್ದಾರೆ.

ದೀಪಾವಳಿಯ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ನೌಶೇರಾ ವಲಯದಲ್ಲಿ ಸೈನಿಕರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಪ್ರಧಾನಿ, 2016ರ ಸರ್ಜಿಕಲ್ ದಾಳಿಯಲ್ಲಿ ಇಲ್ಲಿನ ಬ್ರಿಗೇಡ್ ವಹಿಸಿದ ಪಾತ್ರವನ್ನು ಪ್ರಶಂಸಿಸಿದರು. ಪ್ರಧಾನಿಯಾಗಿ ಮೋದಿ ಅಧಿಕಾರ ವಹಿಸಿಕೊಂಡ ನಂತರ ಸೈನಿಕರ ಜೊತೆ ದೀಪಾವಳಿ ಆಚರಿಸುವ ಪದ್ಧತಿಯನ್ನು ಹೊಂದಿದ್ದಾರೆ.

ಈ ವಲಯದಲ್ಲಿ ಶಾಂತಿ ಕದಡಲು ಅಸಂಖ್ಯ ಪ್ರಯತ್ನಗಳನ್ನು ನಡೆಸಿದರೂ ಸಹ, ಪ್ರತಿ ಬಾರಿ ಉಗ್ರವಾದಕ್ಕೆ ತಕ್ಕ ಉತ್ತರ ಕೊಡಲಾಗಿದೆ ಎಂದು ಮೋದಿ ಹೇಳಿದ್ದಾರೆ.

ಬದಲಾಗುತ್ತಿರುವ ವಿಶ್ವಕ್ಕೆ ಅನುಗುಣವಾಗಿ ಭಾರತ ಸಹ ತನ್ನ ಯುದ್ಧದ ರೀತಿಯನ್ನು ಬದಲಿಸಿಕೊಳ್ಳಬೇಕು. ಸಂಪರ್ಕ ಹಾಗೂ ಸೈನಿಕ ನಿಯೋಜನೆಗಾಗಿ ಆಧುನಿಕ ಗಡಿ ಸೌಲಭ್ಯಗಳನ್ನು ಬಲಪಡಿಸಿಕೊಳ್ಳಬೇಕು



ಎಂದು ಮೋದಿ ಹೇಳಿದ್ದಾರೆ.

ಸೈನಿಕರ ಶೌರ್ಯವನ್ನು ಪ್ರಶಂಸಿಸಿದ ಮೋದಿ, ಸೈನಿಕರು ಭಾರತ ಮಾತೆಯ ಸುರಕ್ಷಾ ಕವಚವಾಗಿದ್ದಾರೆ. ಸೈನಿಕರ ಕಾರಣದಿಂದಾಗಿ ದೇಶದ ಜನತೆ ನೆಮ್ಮದಿಯ ನಿದ್ದೆ ಮಾಡಲು ಹಾಗೂ ಹಬ್ಬಗಳಲ್ಲಿ ಸಂತೋಷ ಕಾಣಲು ಸಾಧ್ಯವಾಗಿದೆ ಎಂದರು.

2016ರ ಸರ್ಜಿಕಲ್ ದಾಳಿಯ ನಂತರ ಈ ಪ್ರಾಂತ್ಯದಲ್ಲಿ ಶಾಂತಿ ಕದಡಲು ಅಸಂಖ್ಯ ಪ್ರಯತ್ನಗಳನ್ನು ನಡೆಸಲಾಯಿತು. ಆದರೆ, ಪ್ರತಿ ಸಂದರ್ಭದಲ್ಲಿ ಉಗ್ರವಾದಕ್ಕೆ ತಕ್ಕ ಉತ್ತರ ನೀಡಲಾಗಿದೆ ಎಂದು ಮೋದಿ ಇದೇ ಸಂದರ್ಭದಲ್ಲಿ ಹೇಳಿದರು.

ಜಮ್ಮು ಮತ್ತು ಕಾಶ್ಮೀರದ ಉರಿಯಲ್ಲಿರುವ ಸೈನಿಕ ನೆಲೆ ಮೇಲೆ ನಡೆಸಲಾದ ಉಗ್ರವಾದ ದಾಳಿಯ ನಂತರ ಸೆಪ್ಟೆಂಬರ್ 29, 2016ರಂದು ನಿಯಂತ್ರಣ ರೇಖೆಯಾಚೆ ಇರುವ ಉಗ್ರವಾದಿ ತಾಣಗಳ ಮೇಲೆ ಸರ್ಜಿಕಲ್ ದಾಳಿ ನಡೆಸಲಾಗಿತ್ತು.

ರಕ್ಷಣಾ ವಲಯಲದಲ್ಲಿ ಆತ್ಮನಿರ್ಭರತೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದ ಪ್ರಧಾನಿ, ಈ ಹಿಂದೆ (5ನೇ ಪುಟಕ್ಕೆ)

# ಇಂದು ಪ್ರಧಾನಿಯಿಂದ ಕೇದಾರನಾಥದಲ್ಲಿ ಶಂಕರಾಚಾರ್ಯರ ಪ್ರತಿಮೆ ಅನಾವರಣ

ಡೆಹರಾಡೂನ್, ನ. 4 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಾಳೆ ಶುಕ್ರವಾರ ಕೇದಾರನಾಥಕ್ಕೆ ಭೇಟಿ ನೀಡಲಿದ್ದು, ಶಿವ ಮಂದಿರದಲ್ಲಿ ಪೂಜೆ ಸಲ್ಲಿಸಲಿದ್ದಾರೆ ಮತ್ತು ಭವ್ಯ ಆದಿ ಗುರು ಶಂಕರಾಚಾರ್ಯ ಪ್ರತಿಮೆ ಅನಾವರಣಗೊಳಿಸಲಿದ್ದಾರೆ.

ಶಂಕರಾಚಾರ್ಯರ ಪ್ರತಿಮೆ 12 ಅಡಿ ಎತ್ತರದ್ದಾಗಿದ್ದು, 35 ಟನ್ ತೂಕದ್ದಾಗಿದೆ. ಇದರ ನಿರ್ಮಾಣ 2019ರಲ್ಲಿ ಆರಂಭವಾಗಿತ್ತು.

2013ರ ಪ್ರವಾಹದಲ್ಲಿ ಶಂಕರಾಚಾರ್ಯರ ಸಮಾಧಿ ಹಾನಿಗೊಳಗಾಗಿತ್ತು. ಮರು ನಿರ್ಮಿಸಿದ ಸಮಾಧಿಯನ್ನೂ ಪ್ರಧಾನಿ ಉದ್ಘಾಟಿಸಲಿದ್ದಾರೆ.

ಇದೇ ವೇಳೆ, 400 ಕೋಟಿ ರೂ.ಗಳ ಕೇದಾರಪುರಿ ಮರು ನಿರ್ಮಾಣ ಯೋಜನೆಗೂ ಮೋದಿ ಶಿಲಾನ್ಯಾಸ ನೆರವೇರಿಸಲಿದ್ದಾರೆ.

ಶಂಕರಾಚಾರ್ಯರ ಪ್ರತಿಮೆ ಅನಾವರಣ ಕಾರ್ಯಕ್ರಮವನ್ನು 12 ಜ್ಯೋತಿರ್‌ಲಿಂಗಗಳು, ನಾಲ್ಕು ಶಂಕರಾಚಾರ್ಯ ಮಠಗಳು, ಅವರ ಜನ್ಮಸ್ಥಳ ಹಾಗೂ ಹಲವು ಪ್ರಮುಖ ದೇವಾಲಯಗಳಲ್ಲಿ ನೇರ ಪ್ರಸಾರ ಮಾಡಲಾಗುವು ದು.

ಕೇದಾರಪುರಿ ಮರು ನಿರ್ಮಾಣ ಯೋಜನೆ ಪ್ರಧಾನ ಮಂತ್ರಿಗಳ ಕನಸಿನ (2ನೇ ಪುಟಕ್ಕೆ)

# ನಟ ಪುನೀತ್‌ರಾಜಕುಮಾರ್‌ಗೆ ಮರಣೋತ್ತರ ಬಸವಶ್ರೀ ಪ್ರಶಸ್ತಿ



ಚಿತ್ರದುರ್ಗ, ನ. 4 - ಕನ್ನಡ ಚಿತ್ರರಂಗದ ಹೆಸರಾಂತ ನಟ ಪವರ್ ಸ್ಟಾರ್ ದಿ|| ಪುನೀತ್ ರಾಜಕುಮಾರ್ ಅವರಿಗೆ ಮರಣೋತ್ತರವಾಗಿ ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಪ್ರತಿಷ್ಠಿತ 2021ನೇ ಸಾಲಿನ ಬಸವಶ್ರೀ ಪ್ರಶಸ್ತಿ ನೀಡಲಾಗುವುದು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಪ್ರಕಟಿಸಿದ್ದಾರೆ. ಶ್ರೀಮಠದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶ್ರೀಗಳು, ಪುನೀತ್ ರಾಜಕುಮಾರ್ ಅವರು, ಬಾಲ ನಟನಾಗಿ, ನಾಯಕ ನಟನಾಗಿ, ಹಿನ್ನೆಲೆ (2ನೇ ಪುಟಕ್ಕೆ)

# ಪೆಟ್ರೋಲ್-ಡೀಸೆಲ್ ಬೆಲೆ ಇಳಿಕೆಗೆ ಸರ್ಕಾರ ಆದೇಶ

## ಪೆಟ್ರೋಲ್ ಬೆಲೆ ಲೀ.ಗೆ 100.63 ರೂ., ಡೀಸೆಲ್ ಬೆಲೆ ಲೀಟರ್‌ಗೆ 85.03 ರೂ.

ಬೆಂಗಳೂರು, ನ. 4 - ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳನ್ನು 7 ರೂ.ಗಳಷ್ಟು ಇಳಿಸಲು ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ. ಕೇಂದ್ರ ಸರ್ಕಾರ ಪೆಟ್ರೋಲ್ ಬೆಲೆ 5 ರೂ. ಹಾಗೂ ಡೀಸೆಲ್ ಬೆಲೆ 10 ರೂ. ಇಳಿಕೆ ಮಾಡಿದ ನಂತರ ರಾಜ್ಯ ಸರ್ಕಾರವೂ ಇಳಿಕೆ ಕ್ರಮಕ್ಕೆ ಮುಂದಾಗಿತ್ತು.

ಕೇಂದ್ರ ಸರ್ಕಾರ ತೆರಿಗೆ ಕಡಿತಗೊಳಿಸಿದ ನಂತರ, ತೆರಿಗೆ ಕಡಿತ ಮಾಡಿದ ರಾಜ್ಯಗಳಲ್ಲಿ ಕರ್ನಾಟಕವೇ ಮೊದಲಾಗಿದೆ.

ಕೇಂದ್ರ ಹಾಗೂ ರಾಜ್ಯಗಳ ತೆರಿಗೆ ಇಳಿಕೆ ಕ್ರಮದಿಂದಾಗಿ ಡೀಸೆಲ್ ಬೆಲೆ ಲೀಟರ್‌ಗೆ 104.50 ರೂ.ಗಳಿಂದ 85.03 ರೂ.ಗಳಿಗೆ ಇಳಿದಿದೆ. ಒಟ್ಟಾರೆ ಇಳಿಕೆ 19.47 ರೂ. ಆಗಿದೆ. ಪೆಟ್ರೋಲ್ ದರ 113.93 ರೂ.ಗಳಿಂದ 100.63 ರೂ.ಗಳಿಗೆ (5ನೇ ಪುಟಕ್ಕೆ)

# 8 ರಿಂದ ಎಲ್.ಕೆ.ಜಿ., ಯು.ಕೆ.ಜಿ. ಆರಂಭ



ಬೆಂಗಳೂರು, ನ. 4 – ರಾಜ್ಯದಲ್ಲಿ ಕೊರೊನಾ ಇಳಿಮುಖವಾಗುತ್ತಿರುವ ಹಿನ್ನೆಲೆಯಲ್ಲಿ ಎಲ್.ಕೆ.ಜಿ. ಹಾಗೂ ಯು.ಕೆ.ಜಿ. ಆರಂಭಕ್ಕೆ ರಾಜ್ಯ ಸರ್ಕಾರ ಅನುಮತಿ ನೀಡಿದೆ. ಕೊರೊನಾ ಪಾಸಿಟಿವ್ ಪ್ರಮಾಣ ಶೇ.2ಕ್ಕಿಂತ ಕಡಿಮೆ ಇರುವ ಕಡೆಗಳಲ್ಲಿ ಇದೇ ದಿನಾಂಕ 8ರ ಸೋಮವಾರದಿಂದ ಈ ತರಗತಿಗಳನ್ನು ಆರಂಭಿಸಬಹುದಾಗಿದೆ.

ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಎಲ್.ಕೆ.ಜಿ. ಹಾಗೂ ಯು.ಕೆಜಿ.ಗಳನ್ನು ಅರ್ಧ ದಿನ ನಡೆಸಬಹುದಾಗಿದೆ.

ರಾಜ್ಯಾದ್ಯಂತ ಅಂಗನವಾಡಿಗಳನ್ನು ಇದೇ ದಿನಾಂಕ 8ರಿಂದ ಆರಂಭಿಸಲು ಆದೇಶಿಸಿರುವ ಬೆನ್ನಲ್ಲೇ, ಎಲ್.ಕೆ.ಜಿ. ಹಾಗೂ ಯು.ಕೆ.ಜಿ.ಗಳಿಗೂ ಅನುಮತಿ ನೀಡಲಾಗಿದೆ.

# ಲಿಂಗ ತಟಸ್ಥ ಕೈಪಿಡಿಗೆ ಆಕ್ಷೇಪ

ನವದೆಹಲಿ, ನ.4 - ಎನ್‌ಸಿಇಆರ್‌ಟಿಯ ಲಿಂಗ ತಟಸ್ಥ ಶಿಕ್ಷಕರ ತರಬೇತಿ ಕೈಪಿಡಿ ಮಕ್ಕಳ ಜೈವಿಕ ವೈವಿಧ್ಯತೆಯ ಅಗತ್ಯಗಳ ಹಕ್ಕನ್ನು ಕಡೆಗಣಿಸಿದೆ ಎಂದು ಹೇಳಿರುವ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್), ಕೈಪಿಡಿಯಲ್ಲಿರುವ ಲೋಪಗಳನ್ನು ಸರಿಪಡಿಸುವಂತೆ ತಿಳಿಸಿದೆ.

ಮಕ್ಕಳಿಗೆ ಲಿಂಗ ತಟಸ್ಥವಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಂತೆ ತಿಳಿಸಿರುವುದು ಲಿಂಗ ವಾಸ್ತವಿಕತೆ ಹಾಗೂ (5ನೇ ಪುಟಕ್ಕೆ)

# ರೈತರೊಂದಿಗೆ ಬಿ.ಸಿ. ಪಾಟೀಲ್ ಜನ್ಮದಿನ



ಬೆಂಗಳೂರು, ನ. 4 - ಕೃಷಿ ಸಚಿವರ ಮಹತ್ವಾಕಾಂಕ್ಷೆಯ ರೈತರೊಂದಿಗೊಂದು ದಿನ ಕಾರ್ಯಕ್ರಮಕ್ಕೆ ಒಂದು ವರ್ಷ ತುಂಬುತ್ತಿದ್ದು, ಕಳೆದ ಬಾರಿಯಂತೆ ಕೃಷಿ ಸಚಿವ ಬಿ.ಸಿ.ಪಾಟೀಲರು ಈ ಬಾರಿಯೂ ಸಹ ತಮ್ಮ ಜನ್ಮ ದಿನವನ್ನು ರೈತರೊಂದಿಗೆ ಕಳೆಯಲಿದ್ದಾರೆ. ನ.14 ಬಿ.ಸಿ.ಪಾಟೀಲರ ಜನ್ಮದಿನ. ಕಳೆದ ವರ್ಷದಿಂದ ತಮ್ಮ ಜನ್ಮದಿನವನ್ನು ರೈತರಿಗಾಗಿ ಮುಡುಪಾಗಿಟ್ಟಿರುವ ಬಿ.ಸಿ.ಪಾಟೀಲರು, ಈ ಬಾರಿಯೂ (5ನೇ ಪುಟಕ್ಕೆ)

# ರಾಜ್ಯಾದ್ಯಂತ ಜನಸೇವಕರ ನೇಮಕ

## ನಿರುದ್ಯೋಗಿಗಳಿಗೆ ಜನ ಸೇವಕರಾಗಲು ತರಬೇತಿ: ಸಿಎಂ

ಬೆಂಗಳೂರು, ನ. 4 - ಸರ್ಕಾರಿ ಯೋಜನೆಗಳು ಮನೆ ಬಾಗಿಲಿಗೆ ತಲುಪಿಸಲು ರಾಜ್ಯಾದ್ಯಂತ ಜನ ಸೇವಕರನ್ನು ನೇಮಕ ಮಾಡಿಕೊಳ್ಳುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನವರಿ 26 ರಿಂದ ಸರ್ಕಾರದ ಯೋಜನೆಗಳನ್ನು ಮನೆ ಬಾಗಿಲಿಗೆ ತಲುಪಿಸುವ ಕಾರ್ಯ ಆರಂಭಗೊಳ್ಳಲಿದೆ ಎಂದು ತಿಳಿಸಿದ್ದಾರೆ.

ಇದಕ್ಕೂ ಮುನ್ನ ನಿರುದ್ಯೋಗಿ ಯುವಕ-ಯುವತಿಯರನ್ನು ಸೇವಕರನ್ನಾಗಿ ನೇಮಕ ಮಾಡಿ, ಅವರಿಗೆ ತರಬೇತಿ ನೀಡಲಾಗುವುದು. ಮನೆಗೆ ಹೋಗಿ ಲ್ಯಾಪ್‌ಟಾಪ್ ಮೂಲಕವೇ ನೋಂದಣಿ, ಸ್ವೀಕೃತಿ, ಅರ್ಜಿ ಪಡೆದು ಸೌಲಭ್ಯಗಳನ್ನು ವಿತರಿಸಬೇಕಿರುವುದರಿಂದ ತರಬೇತಿ ಅತ್ಯಗತ್ಯ ಎಂದರು.

ಬೆಂಗಳೂರಿನಲ್ಲಿ ಪ್ರಾಯೋಗಿಕವಾಗಿ ಜಾರಿಗೊಂಡಿದೆ. ಇಲ್ಲಿ ಪಾಲಿಕೆ ಅಧಿಕಾರಿಗಳು ಯುವಕರಿಗೆ ತರಬೇತಿ ನೀಡಿ ಯೋಜನೆಗೆ ಚಾಲನೆ ನೀಡಿದ್ದಾರೆ.

ರಾಜ್ಯಾದ್ಯಂತ ಅನುಷ್ಠಾನಗೊಳ್ಳಲು ಸರ್ಕಾರ ಸಿದ್ಧತೆ ಮಾಡಿಕೊಳ್ಳುವ ಜತೆಗೆ ಯುವಕರಿಗೆ ತರಬೇತಿ ನೀಡಬೇಕು. ಈ ಕಾರಣದಿಂದ ಗಣರಾಜ್ಯೋತ್ಸವದಂದು ರಾಜ್ಯಾದ್ಯಂತ ಜಾರಿಗೊಳಿಸಲು ನಿರ್ಧರಿಸಲಾಗಿದೆ ಎಂದರು.

ಆಡಳಿತ ಸುಧಾರಣೆಯ ನಿಟ್ಟಿನಲ್ಲಿ ಸಿಎಂ. ಡ್ಯಾಶ್ ಬೋರ್ಡ್ ಸಿದ್ಧವಾಗಿದೆ . ಅಧಿಕಾರಿಗಳು ಪ್ರತಿನಿತ್ಯ ಸುಧಾರಣೆಯನ್ನು ಮೇಲಿನಿಂದ ತಳಮಟ್ಟದವರೆಗೆ ತೆಗೆದುಕೊಂಡು ಹೋಗುವ ಪ್ರಯತ್ನವಿದು. ಎಲ್ಲಾ ಇಲಾಖೆಗಳ ಪ್ರಮುಖ ಯೋಜನೆಗಳ ಬಗ್ಗೆ 15 ದಿನಕ್ಕೊಂದು ಬಾರಿ ಕೋರ್ಸ್ ಕರೆಕ್ಷನ್ ಮಾಡಲಾಗುತ್ತಿದೆ. ರಾಜ್ಯದಲ್ಲಿ ಪ್ರಥಮ ಬಾರಿಗೆ ಸಿಎಂ ಡ್ಯಾಶ್ ಬೋರ್ಡ್ ಸೃಜಿಸಲಾಗಿದೆ ಎಂದರು.

ತಮ್ಮ ಸರ್ಕಾರದ 100 ದಿನಗಳಲ್ಲಿ ಭದ್ರ, ಭರವಸೆಯ ಮತ್ತು ದಿಟ್ಟ ಹೆಜ್ಜೆಗಳನ್ನು ಇಟ್ಟಿದ್ದೇವೆ. ಅಮೃತ ಯೋಜನೆಗಳು, ರೈತರ (2ನೇ ಪುಟಕ್ಕೆ)

# ಧರ್ಮಾಚರಣೆ ಕೊರತೆಯಿಂದ ನೆಮ್ಮದಿ ದೂರ


## ಮಲೇಬೆನ್ನೂರಿನಲ್ಲಿ ನಡೆದ ಇಷ್ಟಲಿಂಗ ಮಹಾಪೂಜೆಯಲ್ಲಿ ರಂಭಾಪುರಿ ಶ್ರೀ

ಮಲೇಬೆನ್ನೂರು, ನ.4- ಲಂಗು, ಲಗಾಮು ಇಲ್ಲದೆ ಬಾಯಿಗೆ ಬಂದಂತೆ ಮಾತನಾಡುತ್ತಿರುವ ರಾಜಕಾರಣಿಗಳ ಬಗ್ಗೆ ಬಾಳೆಹೊನ್ನೂರಿನ ರಂಭಾಪುರಿ ಪೀಠದ ಜಗದ್ಗುರು ಶ್ರೀ ಡಾ.ವೀರಸೋಮೇಶ್ವರ ರಾಜ ದೇಶೀ ಕೇಂದ್ರ ಶಿವಾಚಾರ್ಯ ಭಗವತ್ಪಾದರು ತೀವ್ರ ಬೇಸರ ವ್ಯಕ್ತಪಡಿಸಿದರು.

ಅವರು ಪಟ್ಟಣದ ಶ್ರೀ ಗುರು ರೇಣುಕ ರೈಸ್ ಇಂಡಸ್ಟ್ರೀಸ್‌ನಲ್ಲಿ ದೀಪಾವಳಿ ಅಮಾವಾಸ್ಯೆ ಪ್ರಯುಕ್ತ ಹಮ್ಮಿಕೊಂಡಿದ್ದ ಇಷ್ಟಲಿಂಗ ಮಹಾ ಪೂಜೆ ನೆರವೇರಿಸಿ, ಶ್ರೀಗಳು ಆಶೀರ್ವಚನ ನೀಡಿದರು.

ನಮ್ಮನ್ನಾಳುವ ರಾಜಕಾರಣಿಗಳು ಜಾತಿ, ಮತ ರಹಿತವಾಗಿ ಯಾರ ಭಾವನೆಗಳಿಗೂ ದಕ್ಕೆ ಆಗದಂತೆ ಆಡಳಿತ ನಡೆಸಬೇಕು. ಯಾರಿಗೂ ನೋವಾಗದಂತೆ ಸದೃಢ ನಾಡು ಕಟ್ಟುವ ಕೆಲಸ ಮಾಡಬೇಕು.

ಸಂಘರ್ಷಕ್ಕೆ ಎಡೆಮಾಡಿಕೊಡದೆ ಸಾಮರಸ್ಯದ ವಾತಾವರಣ ನಿರ್ಮಾಣಕ್ಕೆ ಶ್ರಮಿಸಬೇಕೆಂದು ಸ್ವಾಮೀಜಿ ಕಿವಿಮಾತು ಹೇಳಿದರು.



ದಿಕ್ಕು ತಪ್ಪಿ ಅಜ್ಞಾನದ ಕವಲು ದಾರಿಯಲ್ಲಿ ಹೋಗುತ್ತಿರುವ ಜನರಿಗೆ ಧಾರ್ಮಿಕ ಸಂಸ್ಕಾರ, ಗುರು ಪೀಠಗಳ ಮಾರ್ಗದರ್ಶನ ಬಹಳ ಅಗತ್ಯವಾಗಿದ್ದು. ಈ ನಿಟ್ಟಿನಲ್ಲಿ ಧರ್ಮನಿಷ್ಠರು ಹಾಗೂ ಸಮಾಜ ಪ್ರೇಮಿ ಬಿ.ಎಂ. ನಂಜಯ್ಯನವರು ಪ್ರತಿ ವರ್ಷ ದೀಪಾವಳಿ ಹಬ್ಬದ ಅಮವಾಸ್ಯೆ ದಿನದಂದು ಇಷ್ಟಲಿಂಗ ಮಹಾಪೂಜೆ ಮೂಲಕ ಈ ಭಾಗದ ಎಲ್ಲಾ ಜನರಿಗೆ ಧಾರ್ಮಿಕ ಪ್ರಜ್ಞೆ ಮಾಡಿಸುವುದರ ಜೊತೆಗೆ (5ನೇ ಪುಟಕ್ಕೆ)

# ನಗರದಲ್ಲಿ ಗರಿಗೆದರಿದ ಪಟಾಕಿ ವ್ಯಾಪಾರ

## ಹಸಿರು ಪಟಾಕಿ ಮಾಲಿನ್ಯ ಕಡಿಮೆ ಮಾಡಿದರೂ ಅಪಾಯ ಕಡಿಮೆ ಮಾಡದು

ದಾವಣಗೆರೆ, ನ.4- ಪಟಾಕಿ ಸಿಡಿಸದೆ ದೀಪಾವಳಿ ಪೂರ್ಣಗೊಳ್ಳದು ಎಂಬಂತೆ ಹಬ್ಬದಂದು ಪಟಾಕಿ ಭರಾಟೆ ಹೆಚ್ಚು. ಅದರಲ್ಲೂ ನಗರ ಪ್ರದೇಶದಲ್ಲಿ ಹೆಚ್ಚು ಪಟಾಕಿ ಸಿಡಿಸುವುದೇ ಪ್ರತಿಷ್ಠೆ. ಇನ್ನು ಮಕ್ಕಳಿಗೆ ದೀಪಾವಳಿ ಬಂತೆಂದರೆ ತುಂಬಾ ಸಂಭ್ರಮ. ಯಾಕೆಂದರೆ ಹೊಸ ಬಟ್ಟೆಯ ಜತೆಗೆ ಪಟಾಕಿ ಸಿಡಿಸಲು ಅವಕಾಶ ಸಿಗುವುದು.

ಯುವಕರಿಂದ ಹಿಡಿದು ವಯೋವೃದ್ಧರ ತನಕ ಪ್ರತಿಯೊಬ್ಬರು ಪಟಾಕಿ ಸಿಡಿಸಿ ಸಂಭ್ರಮಿಸುತ್ತಾರೆ. ಪಟಾಕಿ ಸಿಡಿಸುವ ಮೂಲಕ ಹಬ್ಬದ ಸಂಭ್ರಮಾಚರಣೆಯನ್ನು ಇಮ್ಮಡಿಗೊಳಿಸುತ್ತಾರೆ. ಹಿರಿಯರ ಪ್ರಕಾರ ಪಟಾಕಿ ಸಿಡಿಸುವುದರಿಂದ ದುಷ್ಟಶಕ್ತಿಗಳು ದೂರವಾಗುವವು ಮತ್ತು ದೀಪಗಳನ್ನು ಬೆಳಗುವ ಕಾರಣದಿಂದಾಗಿ ಒಳ್ಳೆಯತನವನ್ನು ಸ್ವಾಗತಿಸಲಾಗುವುದು. ದೀಪಾವಳಿ ಆಚರಣೆ ಬಗ್ಗೆ ಭಾರತದಲ್ಲಿ ಹಲವಾರು ರೀತಿಯ ಪುರಾಣ ಕಥೆಗಳೂ (5ನೇ ಪುಟಕ್ಕೆ)



# ಶಿಕ್ಷಣ ವ್ಯವಸ್ಥೆಯ ಸುಧಾರಣೆಗೆ ಬದ್ಧತೆಯುಳ್ಳ ಗುರು - ಶಿಷ್ಯರ ಪರಂಪರೆ ಅಗತ್ಯ

## ಡಾ. ಎ.ಬಿ. ರಾಮಚಂದ್ರಪ್ಪ ಗುರುವಂದನಾ ಕಾರ್ಯಕ್ರಮದಲ್ಲಿ ಡಾ. ಕುಮಾರ ಚಲ್ಯ ಅಭಿಮತ



ಹರಿಹರ, ನ.4- ಸಮಕಾಲೀನ ಸಂದರ್ಭದಲ್ಲಿ ಶಿಕ್ಷಣ ವ್ಯವಸ್ಥೆಯ ಸುಧಾರಣೆಗೆ ಬದ್ಧತೆಯುಳ್ಳ ಗುರು-ಶಿಷ್ಯ ಪರಂಪರೆ ಅಗತ್ಯವಾಗಿದೆ ಎಂದು ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರೂ ಆದ ಚಿಂತಕ ಡಾ. ಕುಮಾರ ಚಲ್ಯ ಅಭಿಪ್ರಾಯಪಟ್ಟರು.

ನಗರದ ಗುರುಭವನದಲ್ಲಿ ಎಸ್‌ಜೆವಿಪಿ ಪದವಿ ಮಹಾವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಡಾ. ಎ.ಬಿ. ರಾಮಚಂದ್ರಪ್ಪ ಅವರಿಗೆ ಅವರ ಶಿಷ್ಯ ಹಾಗೂ ಅಭಿಮಾನಿ ಬಳಗದವರು ನಿನ್ನೆ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ವ್ಯವಸ್ಥೆ ವ್ಯಾಪಾರೀಕರಣವಾಗಿದ್ದು, ಕೆಲವು ಶಿಕ್ಷಕರು ಭ್ರಷ್ಟ ವ್ಯವಸ್ಥೆಯ ಭಾಗವಾಗಿದ್ದಾರೆ. ಇದಕ್ಕೆ ಪರ್ಯಾಯವಾಗಿ ಚಿಂತಿಸುವ ಪ್ರಾಧ್ಯಾಪಕರ ಅಗತ್ಯವಿದೆ ಎಂದರು.

ಡಾ. ರಾಮಚಂದ್ರಪ್ಪ ಅವರು ವೃತ್ತಿಯಲ್ಲಿ ಮಾತ್ರ ಜನಪ್ರಿಯವಾಗದೆ, ನಡವಳಿಕೆ ಮತ್ತು ಸಾಮಾಜಿಕ ಚಿಂತನೆಯ ಸಂವೇದನಾ ಶೀಲ ಪ್ರಾಧ್ಯಾಪಕರಾಗಿ ಯಶಸ್ವೀ ಗುರುವೆನಿಸಿದ್ದಾರೆ ಎಂದು ಕುಮಾರ ಚಲ್ಯ ಮೆಚ್ಚುಗೆ ವ್ಯಕ್ತಪಡಿಸಿದರು.

ವ್ಯವಸ್ಥೆಯ ಅಸಮಾನ ನೆಲೆಗಳನ್ನು ಪ್ರಶ್ನಿಸುವ ಮನೋಭಾವ ಇರುವ ವ್ಯಕ್ತಿಗಳು ಸಾಮಾಜಿಕ ಪರಿವರ್ತನೆಯನ್ನು ತಮ್ಮ ವೃತ್ತಿಯಲ್ಲಿ ತರಬಯಸುತ್ತಾರೆ. ಬುದ್ಧ, ಬಸವ, ಅಂಬೇಡ್ಕರ್, ಕುವೆಂಪು, ಲೋಹಿಯಾ ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾದ ಸಂವೇದನಾ ಶೀಲ ವ್ಯಕ್ತಿಗಳು ಸಮ ಸಮಾಜವನ್ನು ಕಟ್ಟಲು ಬಯಸುತ್ತಾರೆ. ಅದಕ್ಕೆ ಅಧ್ಯಾತ್ಮಿಕ ವರ್ಗ ಭೋದಿಸುವ ಪಠ್ಯಗಳನ್ನು ಆ ನೆಲೆಯಲ್ಲಿ ಗ್ರಹಿಸಿ ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಚಿಂತನೆಗಳನ್ನು ಬೆಳೆಸಬೇಕಿದೆ. ಇಂತಹ ಕೆಲಸವನ್ನು ಎಬಿಆರ್ ಅವರು ಕಳೆದ 30 ವರ್ಷಗಳಿಂದ ಮಾಡುತ್ತಾ ಬಂದಿದ್ದಾರೆ ಎಂದು ಅವರು ಶ್ಲಾಘಿಸಿದರು.

ದಾವಣಗೆರೆಯ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಎಸ್.ಆರ್. ಅಂಜನಪ್ಪ, ಡಾ. ದಾದಾಪೀರ್ ನವಿಲೇಹಾಳ್, ಹರಿಹರದ ಎಸ್‌ಜೆವಿಪಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ರೇಣುಕಾ ಸಂಕನಗೌಡರ್, ಜಿ.ಪಂ. ಮಾಜಿ ಅಧ್ಯಕ್ಷ ಡಾ. ವೈ. ರಾಮಪ್ಪ, ಎಂ. ಗೋವಿಂದರೆಡ್ಡಿ, ಮುಖಂಡ ಹೊದಿಗೆರೆ ರಮೇಶ್, ಕೆಪಿಟಿಸಿಎಲ್ ಎಇಇ ಕೆ.ಎಸ್. ಜಯ್ಯಪ್ಪ, ಪ್ರಾಧ್ಯಾಪಕ ಚಿದಾನಂದ್ ಮಾತನಾಡಿ, ಎಬಿಆರ್ ಅವರ ಜನಪರ ಹೋರಾಟಕ್ಕೆ ಬೆಂಬಲ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಎಸ್‌ಜೆವಿಪಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಹಾಗೂ ಸಾಹಿತಿ ಪ್ರೊ. ಸಿ.ವಿ. ಪಾಟೀಲ್ ಮಾತನಾಡಿ, ಎಬಿಆರ್ ಅವರು ಒಂದು ವರ್ಷದ ಓದಿಗಾಗಿ ನಮಗೆ ಕಾಲೇಜಿಗೆ ಬಂದು ನಂತರ ಇಲ್ಲಿಯೇ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವುದು ಅವರ ವಿಶೇಷ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

ಗುರುವಂದನೆ ಸ್ವೀಕರಿಸಿ ಮಾತನಾಡಿದ ಡಾ. ಎ.ಬಿ. ರಾಮಚಂದ್ರಪ್ಪ ಅವರು, ಆಕಸ್ಮಿಕವಾಗಿ ಇಲ್ಲಿಗೆ ಬಂದ ನನಗೆ ಹರಿಹರದ ನೆಲೆ ಎಲ್ಲವನ್ನೂ ಕೊಟ್ಟಿದೆ ಎಂದು ಕೃತಜ್ಞತೆ ಸಲ್ಲಿಸಿದರಲ್ಲದೇ, ತಮ್ಮ ಮುಂದಿನ ಸಾಂಘಿಕ ಹೋರಾಟಕ್ಕೆ ನಿಮ್ಮೆಲ್ಲರ ಬೆಂಬಲ ಹೀಗೆಯೇ ಇರಲಿ ಎಂದು ಕೇಳಿಕೊಂಡರು.

ಎಬಿಆರ್ ಪತ್ನಿ ಶ್ರೀಮತಿ ರಾಜೇಶ್ವರಿ, ಸಹೋದರ ಶೇಖರಪ್ಪ, ಪುತ್ರಿಯರಾದ ಇಂಚರಾ, ಚಂದನ, ಚಿತ್ರದುರ್ಗದ ಕರ್ನಾಟಕ ಇಎನ್‌ಟಿ ಆಸ್ಪತ್ರೆಯ ಡಾ. ಎನ್.ಬಿ. ಪ್ರಹ್ಲಾದ್, ಹಿರಿಯ ಕ್ರೀಡಾಪಟು ಹೆಚ್. ನಿಜಗುಣ, ಪ್ರಾಧ್ಯಾಪಕರಾದ ಪ್ರೊ. ಕರಿಯಪ್ಪ ಮಾಳಗಿ, ಪ್ರೊ. ಮಂಜಪ್ಪ, ಪ್ರೊ. ಇಸ್ಮಾಯಿಲ್ ಎಲಿಗಾರ್, ವಕೀಲರಾದ ಸುಭಾಸ್‌ಚಂದ್ರ ಬೋಸ್, ಶ್ರೀನಿವಾಸ್, ಮುಖಂಡರಾದ ವೈ ರಘುಪತಿ, ಎಜಾಜ್, ಸಂತೋಷ್ ನೋಟಗಾರ್, ಹೆಚ್.ಕೆ. ಕೊಟ್ರಪ್ಪ, ಎಕ್ಕೆಗೊಂದಿ ರುದ್ರಗೌಡ, ಹರಿಹರ ತಾ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್. ಚಂದ್ರಪ್ಪ, ಶಿಕ್ಷಕರಾದ ಭಾಷಾ, ರೇವಣನಾಯ್ಕ, ಹರಪನಹಳ್ಳಿಯ ಭೀಮಣ್ಣ, ಈಶ್ವರ್, ರಾಘು ದೊಡ್ಮನಿ, ಮಾಡಾಳ್ ಶಿವಕುಮಾರ್, ಹರಿಹರ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಪಾರ್ವತಿ, 'ಜನತಾವಾಣಿ' ವರದಿಗಾರ ಜಿಗಳಿ ಪ್ರಕಾಶ್ ಮತ್ತಿತರರು ಭಾಗವಹಿಸಿದ್ದರು.

ಶಾಸಕ ಎಸ್. ರಾಮಪ್ಪ ಅವರು ಕಾರ್ಯಕ್ರಮಕ್ಕೆ ಆಗಮಿಸಿ ಎಬಿಆರ್ ಅವರಿಗೆ ಸನ್ಮಾನಿಸಿ, ಗೌರವಿಸಿದರು.

ಕಲಾವಿದರಾದ ಕತ್ತಿಗೆ ಪರಮೇಶ್ವರಪ್ಪ, ಹೆಗ್ಗೆರೆ ರಂಗಪ್ಪ, ವಸಂತಕುಮಾರ್, ಜಿಗಳಿ ರಂಗನಾಥ್ ಕ್ರಾಂತಿಗೀತೆ ಹಾಡಿದರು.

ಸಾಹಿತಿ ಯು.ಕೆ. ಅಣ್ಣಪ್ಪ ಸ್ವಾಗತಿಸಿದರು. ಕಾರ್ಯಕ್ರಮದ ಸಂಘಟಕ ಡಾ. ಹೊನ್ನಪ್ಪ ಕಾರ್ಯಕ್ರಮ ನಿರೂಪಿಸಿದರೆ, ಕಮಲಾಪುರದ ಡಾ. ಕೊಟ್ರೇಶ್ ವಂದಿಸಿದರು.

## ಮರಣೋತ್ತರ ಬಸವಶ್ರೀ ಪ್ರಶಸ್ತಿ

**(1ನೇ ಪುಟದಿಂದ)** ಗಾಯಕರಾಗಿ, ನಿರ್ಮಾಪಕರಾಗಿ ಕನ್ನಡ ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅಲ್ಲದೇ, ಕರ್ನಾಟಕ ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ರಾಯಭಾರಿಯಾಗಿ, ಸಾಮಾಜಿಕ ಜಾಗೃತಿಯ ಪ್ರಚಾರಕರಾಗಿಯೂ ಸಮಾಜ ಸೇವೆ ಸಲ್ಲಿಸಿದ್ದಾರೆ.

ಇಂತಹ ಮೇರುನಟ ಇತ್ತೀಚೆಗೆ ಹೃದಯಾಘಾತದಿಂದ ನಮ್ಮನ್ನಗಲಿರುವುದು ಕೋಟ್ಯಾಂತರ ಅಭಿಮಾನಿಗಳಿಗೆ ನೋವನ್ನುಂಟು ಮಾಡಿದೆ. ಅವರ ಕುಟುಂಬದವರು ನೋವನ್ನು ಸಹಿಸಿಕೊಳ್ಳಲು ಬಸವಾದಿ ಪ್ರಮಥರ ಆಶೀರ್ವಾದ ಸದಾ ಇರಲಿ. ಮಾನವೀಯ ಮೌಲ್ಯಗಳನ್ನೊಳಗೊಂಡಿದ್ದ ಪುನೀತ್ ಅವರ ಸಾಧನೆ ದೊಡ್ಡದು. ಚಿಕ್ಕ ವಯಸ್ಸಿನಲ್ಲಿಯೇ ಅದ್ವಿತೀಯ ಸಾಧನೆ ಮಾಡಿ ಹೋಗಿದ್ದಾರೆ. ಪ್ರಶಸ್ತಿಯು 5 ಲಕ್ಷ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ಪ್ರಶಸ್ತಿಯನ್ನು ಬರುವ ಬಸವ ಜಯಂತಿ ಕಾರ್ಯಕ್ರಮದಲ್ಲಿ ವಿತರಿಸಲಾಗುವುದು. ಇದೇ ತಿಂಗಳು 10ನೇ ತಾರೀಕು ಬೆಂಗಳೂರಿನ ಅವರ ಮನೆಗೆ ತೆರಳಿ ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಆಡಳಿತ ಮಂಡಳಿ ಸದಸ್ಯ ಕೆಇಬಿ ಷಣ್ಮುಖಪ್ಪ ಇದ್ದರು.

## ರಾಜ್ಯಾದ್ಯಂತ ಜನಸೇವಕರ ನೇಮಕ

**(1ನೇ ಪುಟದಿಂದ)** ಮಕ್ಕಳಿಗೆ ವಿದ್ಯಾರ್ಥಿವೇತನ, ಬಡವರಿಗೆ ಸಂಧ್ಯಾ ಸುರಕ್ಷಾ, ವಿಧವಾ ವೇತನ, ಅಂಗವಿಕಲರ ವೇತನಗಳನ್ನು ಹೆಚ್ಚು ಮಾಡಲಾಗಿದೆ. ಇದಲ್ಲದೆ, ಇನ್ನೂ ಹಲವಾರು ಯೋಜನೆಗಳನ್ನು ರೂಪಿಸುವ ಉದ್ದೇಶವಿದೆ ಎಂದು ಬೊಮ್ಮಾಯಿ ಇದೇ ಸಂದರ್ಭದಲ್ಲಿ ತಿಳಿಸಿದರು. ಆರ್ಥಿಕ ಚೇತರಿಕೆಯನ್ನು ಆಧರಿಸಿ ಮುಂಬರುವ ದಿನಗಳಲ್ಲಿ ಹೆಚ್ಚಿನ ರೀತಿಯಲ್ಲಿ ಜನಪರ ಯೋಜನೆಗಳನ್ನು ಜಾರಿಗೆ ತರಲಾಗುವುದು ಮುಖ್ಯಮಂತ್ರಿಗಳು ತಿಳಿಸಿದರು.

ವ್ಯವಸ್ಥೆಯ ಸುಧಾರಣೆ, ಜನರ ಬಳಿಗೆ ಸರ್ಕಾರ ಹೋಗಬೇಕು ಹಾಗೂ ಆರ್ಥಿಕತೆ ಬೆಳವಣಿಗೆಯ ಹಿನ್ನೆಲೆಯಲ್ಲಿ ಮಾನವ ಸಂಪನ್ಮೂಲ ಉಪಯೋಗ ಮಾಡಿಕೊಳ್ಳಬೇಕು ಎಂಬ ಉದ್ದೇಶ ಸರ್ಕಾರದ್ದು ಎಂದು ತಿಳಿಸಿದರು.

ರಾಜ್ಯದ ತಲಾ ಆದಾಯವನ್ನು ಇತರೆ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕ ಮೊದಲನೇ 5 ನೇ ಸ್ಥಾನದಲ್ಲಿದ್ದರೂ, ಇದರಲ್ಲಿ ಎಲ್ಲ ಜನರ ಕೊಡುಗೆ ಇರಬೇಕು. ಎಸ್.ಸಿ.ಎಸ್.ಟಿ, ಹಿಂದುಳಿದ ವರ್ಗಗಳು ಮತ್ತು ಬಡವರೂ ಸಹ ಆರ್ಥಿಕತೆಯಲ್ಲಿ ಪಾಲ್ಗೊಳ್ಳಲು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ, ಆರ್ಥಿಕ ನೆರವು ನೀಡಬೇಕು ಹಾಗೂ ಹೆಣ್ಣು ಮಕ್ಕಳನ್ನು ಕಾರ್ಯಕ್ರಮಗಳ ಭಾಗವಾಗಿಸುವುದು ನಮ್ಮ ಆಶಯ ಎಂದರು.

ನೂರು ದಿನಗಳಲ್ಲಿ ಆಡಳಿತವನ್ನು ಸರಿಯಾದ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಲು ಅಗತ್ಯವಿರುವ ನಿರ್ಣಯಗಳು ಹಾಗೂ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿರುವ ವಿಚಾರಗಳು ತೃಪ್ತಿ ತಂದಿದೆ ಎಂದರು.

## ಹರಪನಹಳ್ಳಿ ತಾಲ್ಲೂಕು ಕುರುಬ ನೌಕರರ ಸಂಘದ ಅಧ್ಯಕ್ಷರಾಗಿ ಹೆಚ್. ದುರುಗಪ್ಪ





ಹರಪನಹಳ್ಳಿ, ನ.4- ತಾಲ್ಲೂಕು ಕುರುಬ ನೌಕರರ ಸಂಘದ ಅಧ್ಯಕ್ಷರಾಗಿ ಶಿಕ್ಷಣ ಇಲಾಖೆಯ ಎಚ್. ದುರುಗಪ್ಪ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಬೆಸ್ಕಾಂ ಇಲಾಖೆಯ ಟಿ. ಕಿರಣ್ ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ನಿಕಟ ಪೂರ್ವ ಅಧ್ಯಕ್ಷ ಎಸ್. ರಾಮಪ್ಪ ತಿಳಿಸಿದ್ದಾರೆ.

ಪಟ್ಟಣದ ಕೊಟ್ಟೂರು ಸರ್ಕಲ್ ಬಳಿ ತಾಲ್ಲೂಕು ಕುರುಬ ಸಂಘದ ಕಛೇರಿಯಲ್ಲಿ ಮಂಗಳವಾರ ನಡೆದ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ತಾಲೂಕು ಗೌರವ ಅಧ್ಯಕ್ಷರಾಗಿ ಎಸ್. ರಾಮಪ್ಪ, ಹಿರಿಯ ಉಪಾಧ್ಯಕ್ಷರಾಗಿ ಸಿದ್ಧಪ್ಪ, ವೈ. ಹರಿಂದ್ರಾಳ, ಉಪಾಧ್ಯಕ್ಷರಾಗಿ ಜಿ. ಮಹಾದೇವಮ್ಮ, ಬಿ. ಮಂಜುಳ, ಖಜಾಂಚಿಯಾಗಿ ಬಿ.ಎಚ್. ಪ್ರಭಾಕರ್ ಆಯ್ಕೆಯಾಗಿದ್ದಾರೆ.

ಸಹ ಕಾರ್ಯದರ್ಶಿ ಚನ್ನಪ್ಪ ಕಂಬಳಿ, ಸಂಘಟನಾ ಕಾರ್ಯದರ್ಶಿಗಳಾಗಿ ಮಲ್ಲಪ್ಪ ದಳವಾಯಿ, ಡಿ.ಎಂ. ಶಿವಕುಮಾರ್, ನಿರ್ದೇಶಕರಾಗಿ ಎಂ.ಆರ್. ಶ್ರೀದೇವಿ, ರತ್ನಮ್ಮ, ಹೆಗ್ಗಪ್ಪ ಪರಶುನಾಯ್ಕರ, ಜಿ. ಹನುಮಂತಪ್ಪ, ಯು. ಮೈಲಪ್ಪ, ಎಚ್. ಮಂಜುನಾಥ್, ಕೆ. ಮಂಜುನಾಥ್, ಎಲ್. ಪ್ರದೀಪ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದರು.

## ಉಪಚುನಾವಣಾ ಫಲಿತಾಂಶಕ್ಕೆ ಹೆದರಿ ಪೆಟ್ರೋಲ್ ದರ ಇಳಿಕೆ : ದಿನೇಶ್ ಕೆ.ಶೆಟ್ಟಿ

ದಾವಣಗೆರೆ, ನ.4- ಸಂಘ - ಸಂಸ್ಥೆಗಳು ಮತ್ತು ವಿರೋಧ ಪಕ್ಷದವರು ಎಷ್ಟು ಬಾರಿ ಸ್ಟ್ರೈಕ್ ಮಾಡಿದರೂ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಕಡಿಮೆ ಮಾಡದ ಬಿಜೆಪಿ ಸರ್ಕಾರ ಉಪ ಚುನಾವಣೆಯ ಸೋಲಿನ ಫಲಿತಾಂಶಗಳನ್ನು ಗಮನಿಸಿ, ಬಿಜೆಪಿ ಸರ್ಕಾರ ಜನರ ದೃಷ್ಟಿಯಲ್ಲಿ ಒಳ್ಳೆಯವರಾಗುವ ನಾಟಕವಾಡಲು ಪೆಟ್ರೋಲ್, ಡೀಸೆಲ್ ಬೆಲೆ ಕಡಿಮೆ ಮಾಡಿದ್ದಾರೆ.

ಮುಖ್ಯಮಂತ್ರಿ ಮತ್ತು ಸಂಪುಟದ ಎಲ್ಲಾ ಮಂತ್ರಿಗಳು ಟಿಕಾಣಿ ಹೂಡಿ ಹಾನಗಲ್ ಚುನಾವಣೆ ನಡೆಸಿದರು. ಆದರೆ, ಮುಖ್ಯಮಂತ್ರಿ ತಮ್ಮ ತವರು ಕ್ಷೇತ್ರದಲ್ಲೇ ಸೋಲು ಅನುಭವಿಸಿದರು. ಪಶ್ಚಿಮ ಬಂಗಾಳದಲ್ಲಿಯೂ ಬಿಜೆಪಿ ಸೋಲನುಭವಿಸಿದೆ. ಜನರು ಬಿಜೆಪಿಯ ಮೇಲಿಟ್ಟ ನಂಬಿಕೆ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಈಗ ಸರ್ಕಾರ ಅರಿತುಕೊಂಡು ಕೆಟ್ಟ ಮೇಲೆ ಬುದ್ದಿ ಬಂತು ಎಂದು ತಿಳಿದು ಪೆಟ್ರೋಲ್ ಬೆಲೆ ಈಗ ಕಡಿಮೆ ಮಾಡಿದೆ. ಪೆಟ್ರೋಲ್ ಬೆಲೆ 64 ರೂ. ಇದ್ದು ಅದನ್ನು 113 ರೂ. ಮಾಡಿ, ಈಗ 5 ರೂ.ಗೆ ಇಳಿಸಿದರೆ, ಮೊಸಳೆ ಕಣ್ಣೀರು ಹಾಕಿದಂತೆ ಆಗುತ್ತಿದೆ. ಪೆಟ್ರೋಲ್ ದರ ಈಗಿರುವ ಕ್ರೂಡ್ ಆಯಿಲ್ ದರ ಆಧರಿಸಿ, ಇನ್ನೂ ಕಡಿಮೆ ಮಾಡಬೇಕು ಎಂದು ಕಾಂಗ್ರೆಸ್ ಮುಖಂಡ ದಿನೇಶ್ ಕೆ.ಶೆಟ್ಟಿ ಆಗ್ರಹಿಸಿದ್ದಾರೆ.

## ಇಂದು ಗೋ ಪೂಜೆಗೆ ಆಹ್ವಾನ

ದಾವಣಗೆರೆ ತಾಲ್ಲೂಕಿನ ಮುಜರಾಯಿ ಸಂಸ್ಥೆಗೆ ಒಳಪಡುವ ಎ, ಬಿ ಮತ್ತು ಸಿ ಶ್ರೇಣಿ ಸಂಸ್ಥೆಗಳಲ್ಲಿ ಇಂದು ಸಂಜೆ 5.30 ರಿಂದ 6.30 ರ ಗೋದೂಳಿ ಲಗ್ನದಲ್ಲಿ ಗೋ ಪೂಜೆ ನಡೆಯಲಿದ್ದು ಸಾರ್ವಜನಿಕರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಎಂದು ತಹಶೀಲ್ದಾರ್ ಬಿ.ಎನ್.ಗಿರೀಶ್ ತಿಳಿಸಿದ್ದಾರೆ.

## ಪತ್ರಕರ್ತ ಕರಿಬಸವರಾಜುಗೆ ಪ್ರಶಸ್ತಿ



ದಾವಣಗೆರೆ, ನ. 4- ನಗರದ ಸರ್ಕಾರಿ ನೌಕರರ ಭವನದಲ್ಲಿ ಭಾರತೀಯ ಕಲಾ ಸಾಂಸ್ಕೃತಿಕ ಅಕಾಡೆಮಿಯವರು ಹಮ್ಮಿಕೊಂಡಿದ್ದ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹಾದ್ದೂರ್ ಶಾಸ್ತ್ರಿಯವರ ಜನ್ಮ ದಿನಾಚರಣೆ ಮತ್ತು ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಯುವ ಪತ್ರಕರ್ತ ಹಾಗು ಸಾಮಾಜಿಕ ಹೋರಾಟಗಾರ ಕರಿಬಸವರಾಜು ಅವರಿಗೆ ಬಸವ ರತ್ನ ರಾಷ್ಟ್ರ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಹದಡಿ ವಿದ್ಯಾವರಣ್ಯ ಯೋಗೇಶ್ವರ ಮಠದ ಶ್ರೀ ಮುರುಳೀಧರ ಸ್ವಾಮೀಜಿ, ಮಹಾಪೌರ ಎಸ್.ಟಿ. ವೀರೇಶ್, ದಾವಣಗೆರೆ ವಿವಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಹೆಚ್. ವಿಶ್ವನಾಥ್, ಸಾಹಿತಿ ಡಾ. ಗುಣವಂತ ಮಂಜು, ಜಿಲ್ಲಾ ಆರೋಗ್ಯ ಇಲಾಖೆಯ ಜಿಲ್ಲಾ ಫಾರ್ಮಸಿ ಅಧಿಕಾರಿ ಡಾ. ಶಿವಾನಂದ ದಳವಾಯಿ, ಕಲಾ ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷ ಎನ್. ಮಲ್ಲೇಶಪ್ಪ ಕುಕ್ಕುವಾಡ, ವ್ಯವಸ್ಥಾಪಕ ಅಧ್ಯಕ್ಷ ಡಾ. ಎಂ. ಸಂತೋಷ್ ಕುಮಾರ್, ನಿರ್ದೇಶಕರುಗಳಾದ ಡಿ.ಜಿ. ಆಸೀಫ್ ಅಲಿ, ಎ. ಶ್ರೀನಿವಾಸ್, ಎ.ಕೆ. ಪ್ರಕಾಶ್, ಆರ್. ರವಿ ನಾಯಕ್ ಉಪಸ್ಥಿತರಿದ್ದರು.

## 9 ರಂದು ಗೌಡ ಸಾರಸ್ವತ ಬ್ರಾಹ್ಮಣರ ವಧು-ವರರ ಸಭೆ

ದಾವಣಗೆರೆ, ನ. 4- ಉಡುಪಿ ಜಿಲ್ಲೆ ಸಾಲಿಗ್ರಾಮದ ಜಿ.ಎಸ್. ಬಿ.ಎಸ್. ಸೇವಾ ಸಂಘ ಹಾಗೂ ಚೇಂಪಿ ಶ್ರೀ ಲಕ್ಷ್ಮೀವೆಂಕಟರಮಣ ದೇವಸ್ಥಾನ ಸಮಿತಿಯ ಸಂಯುಕ್ತಾಶ್ರಯದಲ್ಲಿ ಬರುವ ಜನವರಿ 9 ರಂದು ಭಾನುವಾರ ಚೇಂಪಿ ದೇವಸ್ಥಾನದ ಶ್ರೀ ಸುಕೃತೀಂದ್ರ ಕಲಾ ಮಂದಿರದಲ್ಲಿ ಜಿ.ಎಸ್.ಬಿ. ವಧು-ವರಾನ್ವೇಷಣೆ ಮೇಳಾ ಮೇಳಿಯ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಸೇವಾ ಸಮಿತಿಯ ಅಧ್ಯಕ್ಷ ಸಾಲಿಗ್ರಾಮ ದಿನಕರ ಭಗವಂತ ಶೆಣೈ ತಿಳಿಸಿದ್ದಾರೆ.

ವಿವರಕ್ಕೆ ಸಂಪರ್ಕಿಸಿ : 9448842897, 9740062205, 9880977217, 9035519047.

## ಚಿರಂತನದಲ್ಲಿ ಕನ್ನಡ ರಾಜ್ಯೋತ್ಸವ



ದಾವಣಗೆರೆ, ನ. 4- ನಗರದ ಚಿರಂತನ ಸಾಂಸ್ಕೃತಿಕ ಸಂಸ್ಥೆಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಚಿರಂತನ ಸಭಾಂಗಣದಲ್ಲಿ ನೃತ್ಯ ಹಾಗೂ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕನ್ನಡದ ಹೆಸರಾಂತ ಕವಿ ಡಿ.ಎಸ್. ಕರ್ಕಿ ಅವರ ಹಚ್ಚೇವು ಕನ್ನಡದ ದೀಪ, ಕುವೆಂಪು ಅವರ ಭಾರಿಸು ಕನ್ನಡ ಡಿಂಡಿಮವ, ಆನಂದಮಯ ಈ ಜಗ ಹೃದಯ, ಡಿ.ವಿ. ಗುಂಡಪ್ಪನವರ ಅಂತಃಪುರ ಗೀತೆಗಳು ಮತ್ತಿತರೆ ಕನ್ನಡ ನಾಡು ನುಡಿಗೆ ಸಂಬಂಧಪಟ್ಟ ಕೃತಿಗಳಿಗೆ ಮಕ್ಕಳು ಹೆಜ್ಜೆ ಹಾಕಿದರು. ಅಲೋಕ್ ಕೀ ಬೋರ್ಡ್ ಮೂಲಕ ಕನ್ನಡ ಗೀತೆ ನುಡಿಸಿದರು.

## ಅಪ್ಪುಗೆ ಸಿನಿಮಾ ಸಿರಿ ನುಡಿ ನಮನ



ದಾವಣಗೆರೆ, ನ. 4- ನಾಡಿನ ಪ್ರತಿಭಾನ್ವಿತ ಚಲನಚಿತ್ರ ನಟ ಪುನೀತ್ ರಾಜಕುಮಾರ್ ಅವರಿಗೆ ಸ್ಥಳೀಯ ಚಲನಚಿತ್ರ ಅಭಿಮಾನಿಗಳ ಕ್ರಿಯಾತ್ಮಕ ಸಂಸ್ಥೆ 'ಸಿನಿಮಾ ಸಿರಿ'ಯಿಂದ ನಗರದ ಶಿವಯೋಗ ಮಂದಿರದ ಒಳಾಂಗಣದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯೊಂದಿಗೆ ನುಡಿ ನಮನ, ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸಂಸ್ಥೆಯ ಕೋಶಾಧ್ಯಕ್ಷ ಹೆಚ್.ವಿ. ಮಂಜುನಾಥ ಸ್ವಾಮಿ, ಸಂಸ್ಥೆಯ ಸಂಸ್ಥಾಪಕರಲ್ಲಿ ಒಬ್ಬರಾದ ಸಾಲಿಗ್ರಾಮ ಗಣೇಶ್ ಶೆಣೈ ಮಾತನಾಡಿ, ಇಂತಹ ಪುಣ್ಯ ಪುರುಷ ಕನ್ನಡ ಅಭಿಮಾನಿಗಳ ಮನಸ್ಸುಗಳಲ್ಲಿ ಅಜರಾಮರರಾದ ಇವರು ಮತ್ತೆ ಈ ಕನ್ನಡ ನಾಡಿನಲ್ಲಿ ಹುಟ್ಟಿ ಬರಲಿ ಎಂದು ತಮ್ಮ ಭಾವನೆ ವ್ಯಕ್ತಪಡಿಸಿದರು.

ಸಂಸ್ಥೆಯ ಪದಾಧಿಕಾರಿಗಳಾದ ಆರ್.ಟಿ. ಮೃತ್ಯುಂಜಯ, ಗಜಾನನ ಭೂತೆ, ಸುರಭಿ ಶಿವಮೂರ್ತಿ, ಭಾವನ್ನಾರಾಯಣ, ಮಲ್ಲಿಕಾರ್ಜುನ ಮತ್ತಿತರರು ಉಪಸ್ಥಿತರಿದ್ದರು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಂ.ಜಿ. ಜಗದೀಶ್ ಸ್ವಾಗತಿಸಿ, ವಂದಿಸಿದರು.

## ಬೀರಲಿಂಗೇಶ್ವರ ದೇವಸ್ಥಾನಕ್ಕೆ ರಂಭಾಪುರಿ ಜಗದ್ಗುರುಗಳ ಭೇಟಿ



**ಮಲೇಬೆನ್ನೂರು**

ಮಲೇಬೆನ್ನೂರು, ನ.4- ಪಟ್ಟಣದ ಶ್ರೀ ಬೀರಲಿಂಗೇಶ್ವರ ದೇವಸ್ಥಾನಕ್ಕೆ ಗುರುವಾರ ಸಾಯಂಕಾಲ ರಂಭಾಪುರಿ ಜಗದ್ಗುರುಗಳು ಭೇಟಿ ನೀಡಿ, ಶ್ರೀ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಜಗದ್ಗುರುಗಳಿಗೆ ದೇವಸ್ಥಾನ ಸಮಿತಿಯವರು ಪಾದಪೂಜೆ ನೆರವೇರಿಸಿದರು. ಜಿ.ಪ. ಮಾಜಿ ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ, ದೇವಸ್ಥಾನ ಸಮಿತಿ ಅಧ್ಯಕ್ಷ ಪೂಜಾರ್ ನಾಗಪ್ಪ, ಗೌರವಾಧ್ಯಕ್ಷ ಪೂಜಾರ್ ರೇವಣಪ್ಪ, ಕಾರ್ಯದರ್ಶಿ ಕೆ.ಪಿ. ಗಂಗಾಧರ್, ಮುಖಂಡರಾದ ಕೆ.ಪಿ. ಹಾಲಪ್ಪ, ಪಿ.ಬಿ. ಹನುಮಂತಪ್ಪ, ಪಿ. ಗಂಗೇನಹಳ್ಳಪ್ಪ, ಬಿ.ಹೆಚ್. ನಾಗೇಂದ್ರಪ್ಪ, ಪಿ.ಬಿ. ಬೀರಪ್ಪ, ಪಿ.ಆರ್. ಪರಮೇಶ್ವರಪ್ಪ, ಪಿ.ಕೆ. ಬಸವರಾಜು, ಟಿ. ರಮೇಶ್, ಪಿ.ಹೆಚ್. ಶಿವಕುಮಾರ್, ಪಿ.ಆರ್. ಬೀರೇಶ್, ಮಲ್ಲಿಕಾರ್ಜುನ್ ಪೂಜಾರ್, ಪಿ.ಎಸ್. ಚಂದ್ರಪ್ಪ, ಪಿ.ಎಸ್. ಸೋಮಶೇಖರ್, ಪಿ. ಮುರುಗೆಪ್ಪ ಮತ್ತಿತರರು ಈ ವೇಳೆ ಹಾಜರಿದ್ದರು.

## ಸಂಕಲ್ಪ ಸೇವಾ ಫೌಂಡೇಶನ್‌ನಿಂದ ಪುರಸ್ಕೃತರಿಗೆ ಅಭಿನಂದನೆ



ದಾವಣಗೆರೆ, ನ. 4- ಸಂಕಲ್ಪ ಸೇವಾ ಫೌಂಡೇಶನ್ ವತಿಯಿಂದ ಜಿಲ್ಲಾಡಳಿತದಿಂದ ಕನ್ನಡ ರಾಜ್ಯೋತ್ಸವದ ಪ್ರಶಸ್ತಿ ಪುರಸ್ಕೃತರಾದ ಡಾ. ಪರಶುರಾಮಪ್ಪ, ಶ್ರೀಮತಿ ಸುರೇಖಾ ಸುನಿಲ್, ಕು. ಉಷಾರಾಣಿ ಅವರಿಗೆ ಗೌರವ ಸಮರ್ಪಣೆ ಹಾಗೂ ಅಭಿನಂದನಾ ಸಮಾರಂಭ ನಡೆಯಿತು .

ಕಾರ್ಯಕ್ರಮಕ್ಕೆ ಮಹಾನಗರ ಪಾಲಿಕೆ ಸದಸ್ಯ ಪ್ರಸನ್ನಕುಮಾರ್, ವಾಸುದೇವ ರಾಯ್ಕರ್, ಟ್ರಸ್ಟ್ ನ ಅಧ್ಯಕ್ಷ ಜಿ. ಮಹಾಂತೇಶ, ಕಾರ್ಯದರ್ಶಿ ಅನಿಲ್ ರಾಯ್ಕರ್, ಪ್ರಕಾಶ್ ಉತ್ತಂಗಿ, ಕರಿಬಸಪ್ಪ, ನಾಗರಾಜ್ ಕೆ.ಜೆ., ಬದರಿ ಪ್ರಸಾದ್, ಮುರುಗೇಶ್ ಉತ್ತಂಗಿ, ಶ್ರೀನಿವಾಸ್, ಪ್ರಕಾಶ್, ಸುನೀಲ್ ಕುಮಾರ್ ಮತ್ತಿತರೆ ಎಲ್ಲಾ ಸ್ನೇಹಿತರು ಭಾಗವಹಿಸಿದ್ದರು.

## ರಾಣೇಬೆನ್ನೂರು : ಸಂಗೀತ ಕಾರ್ಯಕ್ರಮ

ರಾಣೇಬೆನ್ನೂರು, ನ.4- ಅನುಪಲ್ಲವಿ ಸಂಗೀತ ಶಾಲೆ ವತಿಯಿಂದ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 6ರ ಶನಿವಾರ ಸಂಜೆ ಯಶೋಧ ಗುಡಿಗುಡಿ, ಶ್ರೀಧರ್ ಚಲವಾದಿ ಕಲಾವಿದರಿಂದ ಏರ್ಪಡಿಸಿರುವ ಸಂಗೀತ ಕಾರ್ಯಕ್ರಮವನ್ನು ಶಾಸಕ ಅರುಣಕುಮಾರ ಪೂಜಾರ ಉದ್ಘಾಟಿಸುವರು.

## ಪ್ರತಿಮೆ ಅನಾವರಣ

**(1ನೇ ಪುಟದಿಂದ)** ಯೋಜನೆಯಾಗಿದ್ದು, ಹಲವು ಬಾರಿ ಯೋಜನೆಯನ್ನು ಅವರೇ ಪರಿಶೀಲಿಸಿದ್ದಾರೆ. ಮೋದಿ ಪ್ರಧಾನಿಯಾದ ನಂತರ ಐದನೇ ಬಾರಿ ಕೇದಾರನಾಥ ದೇವಾಲಯಕ್ಕೆ ಭೇಟಿ ನೀಡುತ್ತಿದ್ದಾರೆ.

## ವಾಚ್‌ಮ್ಯಾನ್ ರುದ್ರಯ್ಯ ನಿಧನ




ದಾವಣಗೆರೆ ನಿಟುವಳ್ಳಿ ಚಿಕ್ಕನಹಳ್ಳಿ ಹೊಸ ಬಡಾವಣೆ ವಾಸಿ ಹಾಗೂ ಶ್ರೀ ಗುರು ಬಕ್ಕೇಶ್ವರಸ್ವಾಮಿ ದೇವಸ್ಥಾನದ ವಾಚ್‌ಮ್ಯಾನ್ ಶ್ರೀ ರುದ್ರಯ್ಯ (72) ಇವರು ದಿನಾಂಕ 4.11.2021ರ ಗುರುವಾರ ಸಂಜೆ 6 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಮೊಮ್ಮಗ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 5.11.2021ನೇ ಶುಕ್ರವಾರ ಬೆಳಗ್ಗೆ 11.30ಕ್ಕೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.


## ಸೆಂಟ್ರಿಂಗ್ ಕುಸಿದು ಮೂವರು ಕಾರ್ಮಿಕರ ಬಲಿ, ಐವರಿಗೆ ಗಾಯ

ದಾವಣಗೆರೆ, ನ.4- ಕುಕ್ಕುವಾಡದ ದಾವಣಗೆರೆ ಸಕ್ಕರೆ ಕಂಪನಿಯ ನಿರ್ಮಾಣ ಹಂತದಲ್ಲಿದ್ದ ನೂತನ ಎಥೆನಾಲ್ ಘಟಕದ ಸೆಂಟ್ರಿಂಗ್ ಕುಸಿದು ಮೂವರು ಕಾರ್ಮಿಕರು ಸಾವಿಗೀಡಾಗಿದ್ದು, ಐವರು ಗಾಯಗೊಂಡಿದ್ದಾರೆ.

ರಾಯಚೂರು ಜಿಲ್ಲೆಯ ಲಿಂಗಸೂರು ತಾಲ್ಲೂಕಿನ ಕಡೇವು ಗ್ರಾಮದ ಬಸಪ್ಪ (32), ಮಾನಪ್ಪ (32), ಮಜೀದ್ (28) ಮೃತಪಟ್ಟಿದ್ದಾರೆ. ಉಳಿದಂತೆ ಅಮರಪ್ಪ, ಶಿವಣ್ಣ, ರಾಮಣ್ಣ, ಪ್ರವೀಣ ಸೇರಿದಂತೆ ಐವರಿಗೆ ಗಾಯಗಳಾಗಿ ದಾವಣಗೆರೆ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹದಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬೆಳಕಿನ ಹಬ್ಬಕ್ಕೆ ಬೆಲೆ ಏರಿಕೆಯ ಬಿಸಿ..!





**ಉತ್ತಂಗಿ ಕೊಟ್ರೇಶ್**

ಆಕಾಶ ಬುಟ್ಟಿ ಕಟ್ಟಿ, ಸಾಲು- ಸಾಲು ಹಣತೆ ಹಚ್ಚಿ, ತಮಾಷೆ ಮದ್ದಿನ ಪಟಾಕಿ ಸಿಡಿಸಿ, ಮನೆ-ಮನದ ಕತ್ತಲೆಯನ್ನು ದೂರಮಾಡಿ, ಬದುಕಿನಲ್ಲಿ ಹೊಸ ಭರವಸೆಯ ಬೆಳಕನ್ನು ಕಾಣುವುದೇ ಬೆಳಕಿನ ಹಬ್ಬ ದೀಪಾವಳಿ ವಿಶೇಷ.

ನರಕಾಸುರ ಮತ್ತು ರಾವಣರಂತಹ ದುಷ್ಟ ರಾಕ್ಷಸರನ್ನು ಸಂಹರಿಸಿದ ವಿಜಯದ ಸಂಕೇತವಾಗಿ ಆಚರಿಸುವ ದೀಪಾವಳಿ, ಬಲಿಚಕ್ರವರ್ತಿಯ ತ್ಯಾಗದ ಸಂಕೇತವೂ ಹೌದು. ದೀಪದಿಂದ ದೀಪ ಹಚ್ಚಿ ಕತ್ತಲಿನಿಂದ ಬೆಳಕಿನೆಡೆಗೆ ಸಾಗುವ ಹೊಸ ಭರವಸೆ, ಕನಸು ಕಾಣುವ ಹಬ್ಬವೂ ಹೌದು.

ಕಳೆದ ವರ್ಷ ಕೋವಿಡ್ ಕಾರಣದಿಂದಾಗಿ ಈ ಬೆಳಕಿನ ಹಬ್ಬ ಸಂಭ್ರಮದಿಂದ ಕೂಡಿರಲಿಲ್ಲ. ಮಕ್ಕಳ ಮೆಚ್ಚಿನ ಪಟಾಕಿ ಸದ್ದಿನ ಭರಾಟೆಯೂ ಇರಲಿಲ್ಲ. ಈ ವರ್ಷವೂ ಸಹ ಕೊರೊನಾ ಭಯವಿದ್ದರೂ, ಸೋಂಕಿನ ಪ್ರಮಾಣ ಕಡಿಮೆಯಾಗಿರುವುದು ತುಸು ನೆಮ್ಮದಿ ತಂದಿದೆ.




ಸೌಹಾರ್ದತೆಯ ಪ್ರತೀಕ ಎಂಬಂತೆ ಹಿಂದೂ ಧರ್ಮೀಯರ ಜೊತೆಗೆ ಸಿಖ್ಖರು, ಜೈನರು ಸಹ ತಮ್ಮದೇ ಆದ ಸಂಪ್ರದಾಯದಂತೆ ಭಕ್ತಿಯಿಂದ ಆಚರಿಸಲ್ಪಡುವ ದೀಪಾವಳಿ ಪವಿತ್ರ ಹಬ್ಬವಾಗಿದೆ. ಈಗಾಗಲೇ ಹಬ್ಬಕ್ಕೆ ಮನೆ - ಮನೆಗಳಲ್ಲಿ, ಅಂಗಡಿ - ಮುಂಗಟ್ಟುಗಳಲ್ಲಿ ಕಳೆದ ವಾರದಿಂದಲೇ ಸ್ವಚ್ಛತಾ ಕಾರ್ಯ, ಸುಣ್ಣ-ಬಣ್ಣ, ಪೂಜಾ ಸಿದ್ಧತೆಗಳು ಭರದಿಂದ ನಡೆದಿವೆ

ಶ್ರೀಕೃಷ್ಣನಿಂದ ಮಹಾರಾಕ್ಷಸ ನರಕಾಸುರನ ವಧೆಯಾದ ದಿನ ನರಕ ಚತುರ್ದಶಿ. ನೀರು ತುಂಬುವ ಹಬ್ಬ ಎಂತಲೂ ಕರೆಯುವ ಈ ದಿನ, ಹಂಡೆ ತುಂಬಾ ನೀರು ತುಂಬಿ ಕಂಠಕ್ಕೆ ಮಹಾಲಿಂಗನ ಬಳ್ಳಿ ಸುತ್ತಿ ನೀರು ಕಾಯಿಸಿ, ಮೈಯ್ಯಿಗೆ ಎಣ್ಣೆ ಹಚ್ಚಿಕೊಂಡು ಅಭ್ಯಂಗ ಸ್ನಾನ ಮಾಡಿ, ಹೊಸಬಟ್ಟೆ ಧರಿಸಿ ದೇವರ, ಗುರು-ಹಿರಿಯರ ಆಶೀರ್ವಾದ ಪಡೆಯುವುದರಿಂದ ಅಕಾಲ ಮೃತ್ಯು ದೂರವಾಗುತ್ತದೆ ಎಂಬ ನಂಬಿಕೆಯೂ ಇದೆ.

ಪ್ರಜಾಪೀಡಕ, ಸ್ತ್ರೀ ಕಂಟಕ ನರಕಾಸುರನು ಶ್ರೀಕೃಷ್ಣನ ಪ್ರಹಾರದಿಂದ ಕೊನೆಯುಸಿರು ಎಳೆಯುವಾಗ 'ವರ'ವೊಂದನ್ನು ಕೇಳಿ ಪಡೆಯುತ್ತಾನೆ. 'ಈ ತಿಥಿಯಂದು ಯಾರು ಅಭ್ಯಂಗ ಸ್ನಾನ ಮಾಡುತ್ತಾರೋ ಅವರಿಗೆ ನರಕ ಪ್ರಾಪ್ತಿ ಆಗಬಾರದು' ಎಂಬುದೇ ಆ 'ವರ'ದ ವಿಶೇಷ. ಹೀಗಾಗಿ ನರಕ ಚತುರ್ಥಿಗೆ ವಿಶೇಷ ಮಹತ್ವ.

ಅಮಾವಾಸ್ಯೆಯ ದಿನವೂ ಸಹ ಕೆಲವರು, ಅದರಲ್ಲೂ ಮಾರ್ವಾಡಿ ಸಮೂದಾಯದವರು ತಮ್ಮ ಅಂಗಡಿಗಳಲ್ಲಿ ಲಕ್ಷ್ಮೀ ಪೂಜೆಯನ್ನು ಅದ್ದೂರಿಯಾಗಿ, ವಿಜೃಂಭಣೆಯಿಂದ ನೆರವೇರಿಸುತ್ತಾರೆ. ಪಟಾಕಿ ಸಿಡಿಸಿ ಸಂಭ್ರಮಿಸುತ್ತಾರೆ. ಹೆಚ್ಚಿನ ಜನರು ಶುಕ್ರವಾರ ಬಲಿಪಾಡ್ಯಮಿ ದಿನ ತಮ್ಮ ಮನೆ-ಅಂಗಡಿಗಳಲ್ಲಿ ವಿಶೇಷ ಅಲಂಕಾರ ಮಾಡಿ ಭಕ್ತಿಯಿಂದ ಲಕ್ಷ್ಮಿ ಪೂಜೆ ಮಾಡುತ್ತಾರೆ. ಮುಖ್ಯವಾಗಿ ಮನೆ ಹಿರಿಯರ ಪೂಜೆ ಮಾಡಿ ಅವರಿಗೆ ಇಷ್ಟವಾದ ಭಕ್ಷ್ಯ ಭೋಜನಗಳ ಎಡೆ ಹಾಕಿ ಸಂತೃಪ್ತಗೊಳಿಸಿ, ತಾವೂ ಸಹ ಹಬ್ಬದ ಊಟವನ್ನು ಸವಿಯುತ್ತಾರೆ.

ಬಲಿಪಾಡ್ಯಮಿ ದಿನವೇ ಹಟ್ಟಿ ಲಕ್ಕವ್ವನ ಪೂಜೆಯನ್ನೂ ಮಾಡಲಾಗುತ್ತದೆ. ಹಸುವಿನ ಸಗಣಿ ಜೊತೆಗೆ ಉತ್ತರಾಣಿ ಕಡ್ಡಿ, ಕಾಚಿ ಕಡ್ಡಿ, ತಾವರಕಿ ಹೂವು, ಅಣ್ಣೆ ಹೂವು, ಭತ್ತ, ರಾಗಿ, ಜೋಳದ ತೆನೆಗಳನ್ನು ಇಟ್ಟು ವಿಶೇಷವಾಗಿ ಪೂಜಿಸಲಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಇಂತಹ ಪೂಜಾ ವೈಭವವನ್ನು ಕಾಣಬಹುದು. ನಗರ ಪ್ರದೇಶದಲ್ಲಿ ಸಗಣಿಯನ್ನೂ ದುಡ್ಡು ಕೊಟ್ಟೇ ಖರೀದಿಸಬೇಕಿದೆ.

ಮಕ್ಕಳಿಗೆ ಪಟಾಕಿಗಳೆಂದರೆ ಬಹಳ ಇಷ್ಟ. ಕಳೆದ ದೀಪಾವಳಿಯಲ್ಲಿ ಪಟಾಕಿ ಆರ್ಭಟವಿರಲಿಲ್ಲ, ಈ ಬಾರಿಯೂ ಸಹ ಪಟಾಕಿ ಹಚ್ಚುವಲ್ಲಿ ಕೆಲವು ನಿರ್ಬಂಧಗಳನ್ನು ಜಿಲ್ಲಾಡಳಿತ ವಿಧಿಸಿದೆ.

# ರವಿ ನರ್ಸಿಂಗ್ ಹೋಂ

ISO-9001-2008 Certified Organization

(ಕೆಂಚಪ್ಪ ಆಸ್ಪತ್ರೆ), ಮಹಾವೀರ ರಸ್ತೆ, ದಾವಣಗೆರೆ-1.

ಸರ್ವರಿಗೂ ದೀಪಾವಳಿ ಮತ್ತು ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು

- ಡಾ|| ಶ್ರೀನಿವಾಸ ರೆಡ್ಡಿ
- ಡಾ|| ರವಿಕುಮಾರ್
- ಡಾ|| ಧರ್ಮರೆಡ್ಡಿ ಹಾಗೂ ಸಿಬ್ಬಂದಿ ವರ್ಗ.



# ದೃಷ್ಟಿ ಕಣ್ಣಿನ ಆಸ್ಪತ್ರೆ

ಮತ್ತು

## ಆದಿತ್ಯ ಸ್ಕಿನ್ ಮತ್ತು ಕಾಸ್ಮೆಟಾಲಜಿ ಕ್ಲಿನಿಕ್

4ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

ಫೋನ್ : 251584, 251585, ಮೊ : 98441-33022

ಸುಖ ಸಮೃದ್ಧಿಯ ಜ್ಯೋತಿ ನಿಮ್ಮ ಮನೆ-ಮನಗಳನ್ನು ಬೆಳಗಲಿ ಮತ್ತು ಕರ್ನಾಟಕ ರಾಜ್ಯೋತ್ಸವದ

ಹಾರ್ದಿಕ ಶುಭಾಶಯಗಳು.

| | |
|---|---|
| ಡಾ|| ಹೆಚ್.ಎಂ. ರವೀಂದ್ರನಾಥ್<br>ನೇತ್ರ ತಜ್ಞರು. | ಡಾ|| ಸುಮನ ರವೀಂದ್ರನಾಥ್<br>ಚರ್ಮ ರೋಗ ತಜ್ಞರು. |
| ಡಾ|| ಪಿ. ರಾಜೇಶ್<br>ನೇತ್ರ ತಜ್ಞರು. | ಡಾ|| ರಶ್ಮಿ ಮರಳಳ್ಳಿ<br>ನೇತ್ರ ತಜ್ಞರು. |



## ಸರ್ವರಿಗೂ ದೀಪಾವಳಿ ಹಬ್ಬದ ಶುಭಾಶಯಗಳು

# ಶ್ರೀಗಂಧ'ಸ್ ಆನೆಕೊಂಡ ಹನುಮಂತಪ್ಪ ಕನ್‌ವೆನ್ಷನ್ ಹಾಲ್ A/c

ಓಷನ್ ಪಾರ್ಕ್ ಫ್ಯಾಮಿಲಿ ಗಾರ್ಡನ್ ರೆಸ್ಟೋರೆಂಟ್ ಆವರಣ,
ಡಿ.ಸಿ. ಕಚೇರಿ ಹತ್ತಿರ, ಜಿ.ಎಂ.ಐ.ಟಿ. ಕಾಲೇಜು ಮುಂಭಾಗ, ಪಿ.ಬಿ. ರಸ್ತೆ, ದಾವಣಗೆರೆ.



ಶ್ರೀಗಂಧ'ಸ್ ಆನೆಕೊಂಡ ಹನುಮಂತಪ್ಪ ಕನ್‌ವೆನ್ಷನ್ ಹಾಲ್

ಸುಸಜ್ಜಿತ ಮತ್ತು ಅತ್ಯಾಧುನಿಕವಾಗಿದ್ದು, ಇಲ್ಲಿ ಆರತಕ್ಷತೆ, ನಾಮಕರಣ, ಜನ್ಮದಿನ ಸಮಾರಂಭ, ಸಂಭ್ರಮಾಚರಣೆ, ಸಭೆ - ಸಮಾರಂಭಗಳಿಗೆ ಅನುಕೂಲವಾಗಿರುವ AC ಹಾಲ್ ಬಾಡಿಗೆಗೆ ಸಿಗುತ್ತದೆ. ಪ್ರತ್ಯೇಕ ಅಡುಗೆ ಕೋಣೆ ವ್ಯವಸ್ಥೆ ಇರುತ್ತದೆ.

ಸಂಪರ್ಕಿಸಿ: 94485 89727, 70196 74592



ಬೆಳಕಿನ ಹಬ್ಬ ದೀಪಾವಳಿಯು ಎಲ್ಲರ ಮನೆ-ಮನಗಳು ಬೆಳಗಲಿ...

# ಶ್ರೀ ವಿನಾಯಕ ಎಂಟರ್‌ಪ್ರೈಸಸ್
# SHREE VINAYAKA ENTERPRISES

# 1224/54 & 1225/55, ಸೀತಮ್ಮ ಕಾಂಪ್ಲೆಕ್ಸ್, ಜಯನಗರ ಜಿ ಬ್ಲಾಕ್,
ಕಾಳಿದಾಸ ಸರ್ಕಲ್ ಹತ್ತಿರ, ಚರ್ಚ್ ಎದುರು, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ದಾವಣಗೆರೆ-4.

E-mail : vinay.p.shahu23@mail.com



P.R. SHAHU

asianpaints ashirvad PIPES onida Jal Joy of India



VINAYAKA P. SHAHU



ಅಧಿಕೃತ ಮಾರಾಟಗಾರರು :

- ಏಷಿಯನ್ ಪೇಂಟ್ಸ್
- ಆಶೀರ್ವಾದ ಸಿಪಿವಿಸಿ ಪೈಪ್ಸ್ ಕಾಲಂ ಪೈಪ್ಸ್ ಮತ್ತು ಫಿಟ್ಟಿಂಗ್ಸ್
- ಪಿವಿಸಿ ಪೈಪ್ಸ್ ಅಂಡ್ ಫಿಟ್ಟಿಂಗ್
- ಒನಿಡಾ ಸಿಪಿ ಬಾತ್ ಫಿಟ್ಟಿಂಗ್ಸ್
- ಸ್ಯಾನಿಟರಿ ವೇರ್
- ವಾಟರ್ ಸ್ಟೋರೇಜ್ ಟ್ಯಾಂಕ್ಸ್
- ಇತ್ಯಾದಿಗಳು

ಲಕ್ಷ್ಮಿ ಪೂಜೆಗೆ ಆಹ್ವಾನ: ಸಂಜೆ 6 ರಿಂದ 9.30 ರವರೆಗೆ | Mob: 94482 33666, 90665 62529



# ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು



ಕೋರಿ ಶಿವಕುಮಾರ್



ಕೋರಿ ಸಿದ್ದೇಶ್




ಹತ್ತಿರದ ಅಂಗಡಿಗಳಲ್ಲಿ ಲಭ್ಯ

# ಮೆ|| ಕೋರಿ ಹಿರಿಯಣ್ಣ

ರೈಸ್ ಮರ್ಚಂಟ್ಸ್ & ಕಮೀಷನ್ ಏಜೆಂಟ್ಸ್

ಕೆ.ಬಿ. ಬಡಾವಣೆ, ಕಿರುವಾಡಿ ಲೇ ಔಟ್, ದಾವಣಗೆರೆ.

ಮೊ. : 98450 98383, 99452 98383



# ಜನ್ಮದಿನದ ಶುಭಾಶಯಗಳು



ದಾವಣಗೆರೆ ಸಿವಿಲ್ ಇಂಜಿನಿಯರ್ಸ್ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷರೂ, ದಾವಣಗೆರೆ ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷರೂ, 'ಸಿನಿಮಾ ಸಿರಿ' ಸಂಸ್ಥೆಯ ಮಾಜಿ ಅಧ್ಯಕ್ಷರೂ, ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರೂ, ದಾವಣಗೆರೆ ಲಯನ್ಸ್ ಟ್ರಸ್ಟ್ ಟ್ರಸ್ಟಿಗಳೂ, ಶ್ರೀ ಜಯದೇವ ವಿದ್ಯಾರ್ಥಿ ನಿಲಯದ ನಿರ್ದೇಶಕರೂ,
ಹೀಗೆ ಹಲವಾರು ಸಂಘ-ಸಂಸ್ಥೆಗಳಲ್ಲಿ ಎಲೆಮರೆಕಾಯಿಯಾಗಿ ಸಮಾಜ ಸೇವೆ ಸಲ್ಲಿಸುತ್ತಿರುವ ಬಹುಮುಖ ವ್ಯಕ್ತಿತ್ವವುಳ್ಳ, ಬರಹಗಾರರೂ, ವಾಗ್ಮಿಗಳೂ, ಸ್ನೇಹ ಜೀವಿಗಳೂ ಆದ ಕಲಾ ಕನ್‌ಸ್ಟ್ರಕ್ಷನ್‌ನ ಇಂಜಿನಿಯರ್

## ಶ್ರೀ ಹೆಚ್.ವಿ. ಮಂಜುನಾಥಸ್ವಾಮಿ

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು. ಶ್ರೀಯುತರಿಗೆ ಆಯುರಾರೋಗ್ಯ ಭಾಗ್ಯವನ್ನು ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

## ವಾಯುವಿಹಾರ ಮತ್ತು ಹರಟೆಕಟ್ಟೆ ಬಳಗ

- ಡಾ. ಬಿ.ಎಸ್. ನಾಗಪ್ರಕಾಶ್
- ಎಸ್.ಕೆ. ಶಿವಕುಮಾರ್
- ಅಂಬರ್‌ಕರ್ ಮದನ್‌ಕುಮಾರ್
- ಎಂ.ಕೆ. ಬಕ್ಕಪ್ಪ
- ಟಿ.ಎಂ. ಪಂಚಾಕ್ಷರಯ್ಯ
- ಮಲ್ಲಿಕಾರ್ಜುನ ಕಣವಿ
- ವಾಲಿ ರವಿಶಂಕರ್
- ಸುರಭಿ ಶಿವಮೂರ್ತಿ
- ಪ್ರಕಾಶ್ ವಸ್ತ್ರದ್
- ಅಂದನೂರು ನಾಗರಾಜ್
- ಸಂತೋಷ್ ಬಿ.
- ಶಿವಕುಮಾರ್ ಬಿ.ಆರ್.
- ಗಾಂಧಿ ಮಲ್ಲಿಕಾರ್ಜುನ್
- ಸಿ. ಮಂಜುನಾಥ್ CA
- ಎ.ಬಿ. ಪ್ರತಾಪ್
- ಜೆಂಬಿಗಿ ರಾಧೇಶ್
- ಎನ್.ವಿ. ಬಂಡಿವಾಡ
- ಎಂ. ಉಮಾಪತಯ್ಯ CA
- ಎಸ್.ಸಿ. ಬಸವರಾಜ್
- ನಿರಂಜನ್ ನಿಶಾನಿಮಠ್
- ಇ.ಎಂ. ಮಂಜುನಾಥ
- ಆರ್.ಟಿ. ಮೃತ್ಯುಂಜಯ
- ಎಂ.ಜಿ. ಜಗದೀಶ್
- ಈಶ್ವರಿ ಶಿವಕುಮಾರ್
- ಸತ್ಯನಾರಾಯಣ
- ಅಣಬೂರ್ ಮಠ ಪ್ರಭು

ನಗುನಗುತ್ತಾ ನಗಿಸುತ್ತಾ ನೂರು ವರುಷ ಬಾಳಿರಿ

## ಕರುಣೆಯ ಬೆಳಕಿನ ದೀಪಾವಳಿ ಆಚರಿಸೋಣವೇ?

**ನಮ್ಮ ಮುದ್ದು ಮಕ್ಕಳೇ,**

ದುಷ್ಟ ಶಕ್ತಿಗಳ ಮೇಲೆ, ನಮ್ಮೊಳಗೇ ಇರುವ ನಕಾರಾತ್ಮಕಗಳ ವಿಜಯೋತ್ಸವವೇ ದೀಪಾವಳಿ. ಜನರ ನೆಮ್ಮದಿ ಹಾಗೂ ಶಾಂತಿಯನ್ನು ಹಾಳು ಮಾಡಿದ್ದಕ್ಕಾಗಿಯೇ ನರಕಾಸುರನನ್ನು ವಧಿಸಲಾಯಿತು. ಆದರೆ, ಇಂದು ಕೇವಲ ಪಟಾಕಿಗಳನ್ನು ಸುಡುವುದರಿಂದ ಹೊರಹೊಮ್ಮುವ ವಿಷಕಾರಕ ಅನಿಲ ಹಾಗೂ ಅತೀ ಹೆಚ್ಚಿನ ಶಬ್ದಮಾಲಿನ್ಯವನ್ನುಂಟು ಮಾಡುವುದರ ಮೂಲಕ ದುಂದು ವೆಚ್ಚದೊಂದಿಗೆ ದೀಪಾವಳಿ ಹಬ್ಬವನ್ನು ಆಚರಿಸುತ್ತಿದ್ದೇವೆ. ದೀಪಾವಳಿ ಹಬ್ಬದ ಸಂಜೆಯ ಸಮಯದಲ್ಲಿ ಪಾದಚಾರಿಗಳು ಹಾಗೂ ದ್ವಿಚಕ್ರ ವಾಹನಗಳ ಸವಾರರು ತಮ್ಮ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಸಂಚರಿಸುವ ಗಂಭೀರ ಪರಿಸ್ಥಿತಿ ಉಂಟಾಗಿದೆ.

ಮಹಾನಗರಗಳಲ್ಲಿ ಬಹುಪಾಲು ನಿವಾಸಿಗಳು ಮಾಲಿನ್ಯದಿಂದ ಈಗಾಗಲೇ ಅಸ್ತಮಾ ಕಾಯಿಲೆಯಿಂದ ನರಳುತ್ತಿದ್ದಾರೆ. ಅಸ್ತಮಾ, ಬಿಪಿ, ಹೃದಯಸಂಬಂಧಿ ಖಾಯಿಲೆಗಳುಳ್ಳ ಜನರು, ಪಸುಳೆಗಳು ಹಾಗೂ ವೃದ್ಧರಿಗೆ ದೀಪಾವಳಿ ಹಬ್ಬದ ಆಚರಣೆಯು ಭಯಾನಕ ಹಾಗೂ ದುಃಸ್ವಪ್ನವಾಗಿ ಪರಿಣಮಿಸಿದೆ. ದೀಪಾವಳಿಯ ಸಮಯದಲ್ಲಿ ಅಮಾಯಕರು ವಿನಾಕಾರಣ ತಮ್ಮ ಅಮೂಲ್ಯವಾದ ಕಣ್ಣು, ಕೈಕಾಲುಗಳನ್ನು ಹಾಗೂ ಕೆಲವೊಮ್ಮೆ ಜೀವವನ್ನು ಕಳೆದುಕೊಳ್ಳುವ ಮೂಲಕ ಬಲಿಪಶುಗಳಾಗುತ್ತಿದ್ದಾರೆ. ಸಂಭ್ರಮದಿಂದ ಆಚರಿಸುವ ಈ ಹಬ್ಬವು ಕೆಲವೊಂದು ಮುಗ್ಧ ಜನರ ಹಾಗೂ ಜನರ ಕುಟುಂಬ ವರ್ಗದವರಲ್ಲಿ ಮರೆಯಲಾಗದ ಗಾಯ, ಸಾವು-ನೋವು ಮತ್ತು ಸಹಿಸಲಾಗದ ಕೆಟ್ಟ ಪರಿಣಾಮವನ್ನುಂಟು ಮಾಡುತ್ತಿದೆ. ಮಿಂಟೋ ಕಣ್ಣಿನ ಆಸ್ಪತ್ರೆಯ ಅಧ್ಯಯನದ ಪ್ರಕಾರ ಬೆಂಗಳೂರು ನಗರವೊಂದರಲ್ಲಿಯೇ ಪ್ರತಿ ವರ್ಷ ದೀಪಾವಳಿಯ ಸಮಯದಲ್ಲಿ ಸುಮಾರು ಅರವತ್ತು ಜನರ ಕಣ್ಣು ಹಾನಿಗೊಳಗಾಗುತ್ತಿದೆ. ಪ್ರತಿ ವರ್ಷ ರಾಜ್ಯದಲ್ಲಿ 600 ಜನರ ಹಾಗೂ ದೇಶದಲ್ಲಿ 12,000 ಜನರ ಕಣ್ಣುಗಳು ಹಾನಿಗೊಳಗಾಗುತ್ತವೆ ಎಂದು ಅಂದಾಜಿಸಲಾಗಿದೆ. ಒಂದು ದೊಡ್ಡ ಪಟಾಕಿಯನ್ನು ಸಿಡಿಸಿದರೆ ಸಾವಿರಾರು ಪಕ್ಷಿಗಳ ಸವಿ ನಿದ್ದೆಯನ್ನು ಕೆಡಿಸುತ್ತೇವೆ. ನಾವು ಪಟಾಕಿಗಳನ್ನು ಹೊಡೆಯುವುದೇ ರಾತ್ರಿಯಲ್ಲಿ, ಇಲ್ಲವೇ ಮುಂಜಾನೆಯಲ್ಲಿ. ಅದು ಪಕ್ಷಿಗಳು ಗೂಡಿನಲ್ಲಿ ವಿರಮಿಸುವ ವೇಳೆ. ಅವುಗಳ ನಿದ್ದೆ ಕೆಡಿಸಲು ನಮಗೆ ಯಾವ ಹಕ್ಕಿದೆ?

ಮಕ್ಕಳೇ, ದಯವಿಟ್ಟು ಪಟಾಕಿಗಳನ್ನು ಸುಡಲು ಮುಂದಾಗದೆ ತಮ್ಮ ಪುಸ್ತಕಗಳಲ್ಲಿ ಶಬ್ದಮಾಲಿನ್ಯ, ವಾಯುಮಾಲಿನ್ಯದ ಬಗ್ಗೆ ತಾವು ಓದಿರುವುದನ್ನು ತಮ್ಮ ತಂದೆ-ತಾಯಿಗಳಿಗೆ ತಿಳಿಸಿ ಪಟಾಕಿಗಳ ಹಾವಳಿಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅವರಲ್ಲಿ ಅರಿವು ಮೂಡಿಸುವುದರ ಮೂಲಕ ಕಷ್ಟಪಟ್ಟು ದುಡಿದ ಹಣವನ್ನು ಬೂದಿಯಾಗಿಸಿ ಗಟಾರಗಳಲ್ಲಿ ಹರಿಯುವುದನ್ನು ತಪ್ಪಿಸಿ ನಿಮ್ಮ ಮನೆಯ ಸೇವಕರಿಗೆ, ಬಡವರಿಗೆ, ಅಸಹಾಯಕರಿಗೆ ಸಹಾಯ ಮಾಡಲು ಕರುಣಾ ಜೀವ ಕಲ್ಯಾಣ ಟ್ರಸ್ಟ್ ವಿನಂತಿಸಿದೆ.

ಪಟಾಕಿಗಳಿಗೆ ನಾವೆಲ್ಲರೂ ವಿದಾಯ ಹೇಳೋಣ

**- ಶಿವನಕೆರೆ ಬಸವಲಿಂಗಪ್ಪ**

# ಧರ್ಮಗಳ ಮೀರಿದ ಬೆಳಕು...



## ಅಜ್ಞಾನವೆಂಬ ಅಂಧಕಾರವ ಹೋಗಲಾಡಿಸಿ ಹಚ್ಚೋಣ ದೀಪವ ಸುಜ್ಞಾನದೆಡೆಗೆ....

ಅನೇಕ ಧರ್ಮಗಳಲ್ಲಿ ದೀಪಕ್ಕೆ ಹಾಗೂ ಅದರ ಪ್ರಜ್ವಲತೆಗೆ ತನ್ನದೇ ಸ್ಥಾನಮಾನ ಕೊಟ್ಟು ಗೌರವಿ ಸುವುದರ ಜೊತೆಗೆ, ಜ್ಞಾನದ ಪ್ರತೀಕ ವನ್ನಾಗಿಸಿ ರುವುದು ಸಮಂಜಸದ ಅಕುಂಶವೇ ಸರಿ. ಮನುಷ್ಯನಲ್ಲಿರುವ ಅಂಧಕಾರ, ಅಜ್ಞಾನ, ಬುದ್ಧಿ, ಆಚಾರ, ವಿಚಾರಗಳಿಗೆ ಅಂಟಿಕೊಂಡಿರು ವಂತಹ ಕತ್ತಲೆಯನ್ನು ಹೋಗಲಾಡಿಸುವಂತಹದ್ದು ಎಂಬರ್ಥ ಕೂಡ ಇದೆ. ಜೀವನದ, ಮನೆಯ ಹಾಗೂ ಮನದ ಎಲ್ಲಾ ಋಣಾತ್ಮಕ ಅಂಶಗಳನ್ನು ಹೋಗಲಾಡಿಸಲು ದೀಪ ಬೆಳಗುತ್ತೇವೆ. ಹಬ್ಬಗಳು ಮಾನವ ಜೀವನದ ಬಹುಮುಖ್ಯ ಅಂಶವಾಗಿವೆ. ಸಹೋದರತ್ವ, ಬಾಂಧವ್ಯ ಮತ್ತು ಮಾನವನ ಸಾಮಾಜಿಕ ಜೀವನವನ್ನು ಹಂಚಿಕೊಳ್ಳುವಂತಹ ಸಂಭ್ರಮಗಳಲ್ಲಿ ಹಬ್ಬಗಳು ಕೂಡ ಒಂದು.

ಬೆಳಕಿನ ಪರ್ಯಾಯಕ್ಕೆ ನಮ್ಮ ಕಣ್ಣಿಗೆ ಕಾಣುವ ಪ್ರತ್ಯಕ್ಷ ದೈವಗಳೆಂದರೆ ಸೂರ್ಯ ಮತ್ತು ಚಂದ್ರ. ಇವುಗಳ ಆಧಾರಗಳ ಮೇಲೆ ಭುವಿಯ ಮೇಲಿರುವ ಸಕಲ ಜೀವಿಗಳಿಗೂ ಪುನಶ್ಚೇತನದ ಹಾಗೂ ಹಬ್ಬದ ಪರಿಕಲ್ಪನೆ ಇದೆ. ಅದಕ್ಕೆ ಪೂರಕವಾಗಿ ಡಿವಿಜಿಯವರ ಕಗ್ಗ

*'ಭಾನೂದಯಾಸ್ತಗಳಿನಲ್ತೆ ದಿಕ್ಕಾಲಗಳ' ಮಾನಗಣಿತವು ನಮಗೆ?*

*ಭಾನುವಿರದೊಡದೇಂ?*
*ಅನಂತ್ಯ, ಶುದ್ಧಸತ್ತಾಮಾತ್ರ, ಬೊಮ್ಮನದು ಲೀನನಾಗದರೊಳಗೆ" – ಮಂಕುತಿಮ್ಮ*

ಪೂರಕವಾಗಿ ನಿಲ್ಲುತ್ತದೆ. ಈ ಸೂರ್ಯ, ಭೂಮಿ ಮತ್ತು ಸಕಲ ಚರಾಚರಗಳ ಹುಟ್ಟು ಮತ್ತು ಅಸ್ತಿತ್ವಕ್ಕೆ ಕಾರಣ ಆ ಪರತತ್ವ. ಪರತತ್ವ ಶುದ್ಧಸತ್ವದಿಂದ ಕೂಡಿದೆ. ಸೂರ್ಯನಿರುವುದರಿಂದ ಕಾಲದ ಗಣನೆ ಮತ್ತು ಅದನ್ನನುಸರಿಸಿ ನಮ್ಮ ಎಲ್ಲಾ ಆಚಾರಗಳು, ವಿಚಾರಗಳು, ರೂಢಿಯಲ್ಲಿರುವ ಸಂಪ್ರದಾಯಗಳು. ಹದಿನಾಲ್ಕು ದಿನಗಳಿಗೊಮ್ಮೆ ಬರುವ ಹುಣ್ಣಿಮೆ, ಅಮಾವಾಸ್ಯೆಗಳು, ಸೂರ್ಯ ಚಂದ್ರರ ಉದಯಾಸ್ತಮಾನಗಳನ್ನಾಧರಿಸಿ ನಾವು ಆಚರಿಸುವ ಹಬ್ಬಗಳು ದೀಪಾವಳಿ, ಯುಗಾದಿ, ಇತ್ಯಾದಿ... ಅಂದ ಮೇಲೆ ಈ ಇಡೀ ಜಗತ್ತಿಗೆ ಆಕಾಶದೀಪವೇ ಮುಖ್ಯವೆನಿಸುತ್ತದೆ. ಸ್ಕಂದ ಪುರಾಣದಲ್ಲಿ ದೀಪವನ್ನು ಸೂರ್ಯನ ಪ್ರತಿನಿಧಿ ಎಂದು ಪರಿಗಣಿಸಲಾಗಿದೆ. ಅಷ್ಟೇ ಪ್ರಮುಖವಾಗಿ ಭುವಿಯ ಮೇಲೆ ದೀಪದ ಬೆಳಕಿಗೆ ಪ್ರಧಾನವಾದ ದೀಪಾವಳಿ ಹಬ್ಬವು ಎಷ್ಟು ಧಾರ್ಮಿಕ ಮಹತ್ವವನ್ನು ಹೊಂದಿದೆಯೋ, ಅಷ್ಟೇ ಐತಿಹಾಸಿಕ ಮಹತ್ವವನ್ನು ಹೊಂದಿದೆ. ದೀಪಾವಳಿ ಹಬ್ಬದ ಪ್ರಮುಖ ಸಂದೇಶ, ಅಧರ್ಮದ ವಿರುದ್ಧ ಧರ್ಮದ ಅಥವಾ ಕೆಡುಕಿನ ವಿರುದ್ಧ ಒಳಿತಿನ ವಿಜಯದ ಸಂಭ್ರಮ. ಪ್ರಭು ಶ್ರೀರಾಮಚಂದ್ರನು ರಾವಣನನ್ನು ವಧಿಸಿ, ಸೀತಾ ಲಕ್ಷ್ಮಣರೊಡಗೂಡಿ ಹದಿನಾಲ್ಕು ವರ್ಷಗಳ ಬಳಿಕ ಅಯೋಧ್ಯೆಗೆ ಹಿಂತಿರುಗಿದ ಸಂಭ್ರಮದ ಸುಸಂದರ್ಭ. ಅಮಾವಾಸ್ಯೆಯ ಹಿಂದಿನ ದಿನವನ್ನು ನರಕ ಚತುರ್ದಶಿ ಎಂದು ಆಚರಿಸುವ ಸಂಪ್ರದಾಯವಿದ್ದು, ಶ್ರೀ ಕೃಷ್ಣ ಪರಮಾತ್ಮನು ನರಕಾಸುರನನ್ನು ಸಂಹರಿಸಿದ ದಿನವೆಂದು ಆಚರಿಸಲಾಗುತ್ತದೆ. ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಅಮಾವಾಸ್ಯೆಯ ಮಾರನೆಯ ದಿನವನ್ನು ಬಲಿಪಾಡ್ಯಮಿ ಎಂದು ಆಚರಿಸಲಾಗುತ್ತದೆ, ಇದು ವಾಮನ ಹಾಗೂ ಬಲಿ ಚಕ್ರವರ್ತಿಯ ನಡುವೆ ನಡೆದ ಐತಿಹಾಸಿಕ ಘಟನೆಯಲ್ಲಿ ಬಲಿ ಚಕ್ರವರ್ತಿಯ ತ್ಯಾಗವನ್ನು ಸ್ಮರಿಸುವ ಸಲುವಾಗಿ ಆಚರಿಸಲಾಗುತ್ತದೆ. ಇಷ್ಟು ಮಾತ್ರವಲ್ಲದೆ ಭಾರತದಲ್ಲಿ ದೀಪಾವಳಿಯ ನಂತರ ಕೊರೊನಾ ಕಾಲದ ನಂತರ ಹೊಸ ಆರ್ಥಿಕ ವರ್ಷವೂ ಪ್ರಾರಂಭವಾಗುತ್ತಿದೆ ಎಂದರೆ ತಪ್ಪಾಗಲಾರದು.

ಎಲ್ಲಾ ಧರ್ಮಗಳಲ್ಲೂ ಬೆಳಕಿನ ಉಲ್ಲೇಖ ಮಾತ್ರ ಅರ್ಥಪೂರ್ಣ. ಪತಂಜಲಿ ಯೋಗ ಸೂತ್ರದಲ್ಲಿ "ತಮಸೋಮ ಜ್ಯೋತಿರ್ಗಮಯ" ಎಂಬ ಬೆಳಕಿನೆಡೆಗೆ ನಡೆಯುವ ಪ್ರಾರ್ಥನೆಯಿದೆ.

"ಆತ್ಮದೀಪಂ ಅತ್ತಶರಣಂ" ಆತ್ಮವೇ ದೀಪ ಆತ್ಮಕ್ಕೆ ಶರಣಾಗು ಎನ್ನುತ್ತಾನೆ ಬುದ್ಧ. ದೇಹಕ್ಕೆ ಆರೋಗ್ಯವೇ ಬೆಳಕು, ಮನಸಿಗೆ ಆನಂದವೇ ಬೆಳಕು ಬುದ್ದಿಗೆ ವಿವೇಕವೇ ಬೆಳಕು , ಅಹಂಗೆ ಶೂನ್ಯವೇ ಬೆಳಕು. ಎಚ್ಚರಿಕೆಯಿಂದ ಹಬ್ಬವನ್ನು ಆಚರಿಸೋಣ. ಮಕ್ಕಳ ಬಗ್ಗೆ ಗಮನವಿರಲಿ. ದೀಪಾವಳಿ ಬೆಳಕಿನ ಹಬ್ಬ ಎಲ್ಲರ ಬಾಳಲ್ಲೂ ಜ್ಞಾನದ ಸಮೃದ್ದಿಯ ಬೆಳಕನ್ನು ಹರಿಸಲಿ.

**- ಪಾಪುಗುರು,** ದಾವಣಗೆರೆ.
sgurumanase@gmail.com

## ಮೀನುಗಾರಿಕೆಗೆ ನೀರು ಕಾಗೆ

ಮನುಷ್ಯ ಪ್ರಕೃತಿಯಲ್ಲಿನ ಎಲ್ಲಾ ವಸ್ತುಗಳು ಮತ್ತು ಜೀವಿಗಳು ತನ್ನ ಉಪಯೋಗಕ್ಕೆ ಮಾತ್ರ ಎಂದು ಪರಿಗಣಿಸಿದ್ದಾನೆ. ಪ್ರತಿಯೊಂದು ಜೀವಿಗೂ ತನ್ನದೇ ಬದುಕು ಜೀವಿಸುವ ಹಕ್ಕಿದೆ ಎಂಬುದನ್ನು ಮರೆತಿದ್ದಾನೆ. ಅದಕ್ಕೊಂದು ಉದಾಹರಣೆ ಮೀನುಗಾರಿಕೆಗೆ ನೀರು ಕಾಗೆಯನ್ನು ಬಳಸುವುದು.

ನೀರು ಕಾಗೆ ಜಲಪಕ್ಷಿಗಳ ಜಾತಿಗೆ ಸೇರಿದ ಒಂದು ಪ್ರಭೇದ. ಇದೊಂದು ದೊಡ್ಡ ನೀರು ಹಕ್ಕಿ. ಕೆರೆ, ನದಿ ಪಾತ್ರಗಳಲ್ಲಿ ಬದುಕುವ ಇವು ಆಹಾರಕ್ಕಾಗಿ ಮೀನುಗಳನ್ನೇ ತಿನ್ನುತ್ತವೆ.



ನೀರಿನಲ್ಲಿ ಮುಳುಗಿ ಮೀನುಗಳನ್ನು ಬೇಟೆಯಾಡುವುದರಲ್ಲಿ ಈ ಹಕ್ಕಿಗಳು ನೈಸರ್ಗಿಕ ಕೌಶಲ್ಯ ಪಡೆದಿವೆ. ಮೀನುಗಳನ್ನು ಬೆಂಬತ್ತಿ ಕೊಕ್ಕಿನಿಂದ ಹಿಡಿದು ಮೇಲೆ ಬಂದು ಹಾರಿಸಿ ಇಡಿಯಾಗಿ ನುಂಗುತ್ತವೆ. ಅಂದಾಜು 15 ನಿಮಿಷಗಳವರೆಗೆ ನೀರಿನಲ್ಲಿ ಮುಳುಗಿ ಮೀನುಗಳನ್ನು ಬೇಟೆಯಾಡುವಂತಹ ಚತುರತೆ ಇದಕ್ಕಿದೆ. ತಮ್ಮಲ್ಲಿನ ವಿಶೇಷ ಪುಕ್ಕಗಳಿಂದ ಇವು ನೀರಿನಲ್ಲಿ ಸರಾಗವಾಗಿ ಮುಳುಗಿ ಈಜಬಲ್ಲವು. ಇವುಗಳು ಮೀನು ಬೇಟೆಯಾಡುವ ಜೀವನ ಶೈಲಿ ಅನನ್ಯ.

ನೀರು ಕಾಗೆಗಳ ನೈಪುಣ್ಯವನ್ನು ಚೀನಾ, ಜಪಾನ್, ಕೊರಿಯಾ ಮುಂತಾದ ದೇಶಗಳಲ್ಲಿ ಮೀನು ಶಿಕಾರಿಗಾಗಿ ಬಳಸುತ್ತಾರೆ. ಇವುಗಳನ್ನು ಸಾಕಿ ಅವುಗಳ ಕೊರಳಿಗೆ ಉಂಗುರದಂತಹ ಬಳೆಯನ್ನು ತೊಡಿಸುತ್ತಾರೆ. ಕಾಲಿಗೆ ಉದ್ದವಾದ ಹಗ್ಗವನ್ನು ಕಟ್ಟಿ ದೋಣಿಯಲ್ಲಿ ಸಾಗಿಸುತ್ತಾರೆ. ನದಿ ಅಥವಾ ಕೆರೆಗಳಲ್ಲಿ ಮೀನುಗಳಿರುವ ಕಡೆ ಇವುಗಳನ್ನು ನೀರಿಗೆ ಬಿಡುತ್ತಾರೆ. ತನ್ನ ನೈಸರ್ಗಿಕ ಚಾಕಚಕ್ಯತೆಯಿಂದ ನೀರಿನಲ್ಲಿ ಮುಳುಗಿ ಇವು ಮೀನು ಹಿಡಿಯುತ್ತವೆ.

ಕುತ್ತಿಗೆಗೆ ಹಾಕಿರುವ ಉಂಗುರದಿಂದ ಇವುಗಳು ಮೀನನ್ನು ನುಂಗಲು ಆಗುವುದಿಲ್ಲ. ಮೀನುಗಾರರು ಮೀನು ಹಿಡಿದ ಈ ಹಕ್ಕಿಗಳನ್ನು ದೋಣಿಗೆ ಎಳೆದು ಗಂಟಲಿನಲ್ಲಿರುವ ಮೀನನ್ನು ಕಕ್ಕಿಸುತ್ತಾರೆ. ಮತ್ತೆ ಹಕ್ಕಿಗಳನ್ನು ಮೀನು ಬೇಟೆಗೆ ಬಿಡುತ್ತಾರೆ. ಹೀಗೆ ಪ್ರತಿ ಹಕ್ಕಿಯಿಂದ ನೂರಾರು ಮೀನುಗಳನ್ನು ಹಿಡಿದು ತರುತ್ತಾರೆ. ದಿನದ ಕೊನೆಯಲ್ಲಿ ಕೂಲಿ ಕೊಟ್ಟಂತೆ ಕೆಲವು ಮೀನುಗಳನ್ನು ಆಹಾರವಾಗಿ ಕೊಡುತ್ತಾರೆ. ತಾನೇ ಬಾಯಲ್ಲಿ ಹಿಡಿದು ಗಂಟಲಿನಲ್ಲಿ ನುಂಗಿದ ಮೀನು ಹೊಟ್ಟೆಗೆ ಹೋಗದಂತಹ ದೈನೇಸಿ ಪರಿಸ್ಥಿತಿ ಈ ಹಕ್ಕಿಗಳದ್ದು. ಹಕ್ಕಿಗಳ ಶ್ರಮ ಮನುಷ್ಯನ ಲಾಭ. ಏನೆಂದು ನಾ ಹೇಳಲಿ..... ಮಾನವನಾಸೆಗೆ ಕೊನೆಯೆಲ್ಲಿ......

**- ಡಾ. ಎಸ್. ಶಿಶುಪಾಲ**
ಪ್ರಾಧ್ಯಾಪಕರು, ಸೂಕ್ಷ್ಮ ಜೀವಶಾಸ್ತ್ರ ವಿಭಾಗ, ದಾವಣಗೆರೆ ವಿವಿ

## ಸೌರಭ ದಾಸ ವಿದ್ಯಾಲಯ ವತಿಯಿಂದ ಮುಂಡಿಗೆ ಮಂಥನ ಕಾರ್ಯಕ್ರಮ



ದಾವಣಗೆರೆ, ನ.4- ಸೌರಭ ದಾಸ ವಿದ್ಯಾಲಯ,(ವಿಶ್ವ ಮಧ್ವ ಪರಿಷತ್) ದಾವಣಗೆರೆ ಕೇಂದ್ರದ ವತಿಯಿಂದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಪಿ.ಜೆ. ಬಡಾವಣೆಯಲ್ಲಿ ಮುಂಡಿಗೆ ಮಂಥನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಪ್ರಪಂಚದಾದ್ಯಂತ ಅನೇಕ ಕೇಂದ್ರಗಳಿಂದ ಅಂತರ್ಜಾಲದ ಮುಖಾಂತರ ಕೊಪ್ಪಳದ ಮುಖ್ಯಕೇಂದ್ರದಿಂದ ನಡೆಸಲಾಯಿತು. ನಗರ ಕೇಂದ್ರದ ಸದಸ್ಯರಿಂದ ಕನಕದಾಸರ 'ಅಂಧಕನನುಜನ ಕಂದನ ತಂದೆಯ' ಎಂಬ ಮುಂಡಿಗೆಯನ್ನು ಪಾರಾಯಣ ಮಾಡಲಾಯಿತು.

ಮೊದಲಿಗೆ ಮುಂಡಿಗೆ ಎನ್ನುವುದು ಮುಂಡಾಸು ಎನ್ನುವ ಪದದಿಂದ ಉತ್ಪನ್ನವಾದದ್ದೆಂದು ಕಂಡು ಬರುತ್ತದೆ. ಮುಂಡಾಸು ಅಂದರೆ ತಲೆಗೆ ಸುತ್ತಿಕೊಳ್ಳುವ, ವ್ಯಕ್ತಿಯ ಗೌರವವನ್ನು ಹೆಚ್ಚಿಸುವ ವಸ್ತ್ರ. ಇದೇ ಅರ್ಥವನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ತಲೆಗೆ ಕಸರತ್ತು ಕೊಡುವ ಈ ಪ್ರಕಾರವನ್ನು ಮುಂಡಿಗೆ ಎಂದು ಕರೆದಿರಬಹುದು ಅಂತ ತಿಳಿಯುತ್ತದೆ.

## ನಗರದಲ್ಲಿ ಧನ್ವಂತರಿ ಹೋಮ



ದಾವಣಗೆರೆ, ನ.4- ಧನ್ವಂತರಿ ಜಯಂತಿ ಪ್ರಯುಕ್ತ ನಗರದ ಅನ್ವಯ ಆಯುರ್ವೇದ ಆಸ್ಪತ್ರೆಯಲ್ಲಿ ಧನ್ವಂತರಿ ಹೋಮವನ್ನು ಲೋಕ ಕಲ್ಯಾಣಾರ್ಥವಾಗಿ ಮತ್ತು ಮನುಕುಲದ ಆರೋಗ್ಯ ವೃದ್ಧಿಗೆ ನಡೆಸಲಾಯಿತು. ಆಸ್ಪತ್ರೆಯ ನಿರ್ದೇಶಕರು ಮತ್ತು ಮುಖ್ಯ ವೈದ್ಯ ಡಾ. ದರ್ಶನ್ ಬಾಬು ಅವರು ವೇದಗಳ ಅನುಶಾಸನದಂತೆ ಮುಖ್ಯ ಅರ್ಚಕರಾದ ಕೃಷ್ಣಪ್ರಸನ್ನ ಆಚಾರ್, ವೆಂಕಟ ರಾಘವನ್, ಲೋಹಿತ್ ಅವರು ಧನ್ವಂತರಿ ಹೋಮವನ್ನು ನೆರವೇರಿಸಿದರು. ಸಹ ನಿರ್ದೇಶಕ ನಂದಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಬಡ ರೋಗಿಗಳಿಗೆ ಸಹಾಯ



ದಾವಣಗೆರೆ, ನ. 4- ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟಿನ ವತಿಯಿಂದ ಸಿ.ಜಿ. ಆಸ್ಪತ್ರೆಯಲ್ಲಿನ ಬಡ ರೋಗಿಗಳಿಗೆ ಆಸ್ಪತ್ರೆಯಲ್ಲಿ ಲಭ್ಯವಿಲ್ಲದ, ಹೊರಗಡೆ ಬರೆದ ಔಷಧಿಯನ್ನು ತೆಗೆದುಕೊಳ್ಳಲಾಗದೆ ಪರದಾಡುತ್ತಿರುವವರನ್ನು ಹುಡುಕಿ ಔಷಧಿ ಕೊಡಿಸಲಾಗುತ್ತಿದೆ. ದಾನಿಗಳ ಸಹಾಯದಿಂದ ಈ ಕಾರ್ಯ ಮಾಡಲಾಗುತ್ತಿದ್ದು, ಸಹಾಯ ಮಾಡಲಿಚ್ಛಿಸುವ ದಾನಿಗಳು 9110455199 ಈ ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.

## ಪಾರಂಪರಿಕ ವೈದ್ಯ ಪರಿಷತ್ ಕಛೇರಿಯಲ್ಲಿ ಧನ್ವಂತರಿ ಜಯಂತಿ



ದಾವಣಗೆರೆ, ನ. 4- ನಗರದ ಪಾರಂಪರಿಕ ವೈದ್ಯ ಪರಿಷತ್ತಿನ ಕಛೇರಿಯಲ್ಲಿ ಪರಿಷತ್ತಿನ ಜಿಲ್ಲಾಧ್ಯಕ್ಷ, ವೈದ್ಯ ರಹಮತ್ ಉಲ್ಲಾ ಅವರ ಅಧ್ಯಕ್ಷತೆಯಲ್ಲಿ ಧನ್ವಂತರಿ ಜಯಂತಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ವೈದ್ಯ ಗುರುಸಿದ್ದಪ್ಪ ಅವರು ಮಾತನಾಡಿ, ಧನ್ವಂತರಿ ಜಯಂತಿಯ ವಿಶೇಷತೆಯನ್ನು ಹೇಳಿ ಕಳೆದ 20 ವರ್ಷಗಳಿಂದ ತಪ್ಪದೇ ಆಚರಿಸಿಕೊಂಡು ಬರುತ್ತಿರುವುದಾಗಿ ಹೇಳಿದರು. ವೈದ್ಯ ಪರಿಷತ್ತಿಗೆ 20 ವಸಂತಗಳನ್ನು ಮುಗಿಸಿದ ಸಂಭ್ರಮಾಚರಣೆಯ ಅಂಗವಾಗಿ ಡಿಸೆಂಬರ್ ತಿಂಗಳಲ್ಲಿ ಮೂರು ದಿನಗಳ ಮೂಲಿಕಾ ಉತ್ಸವ ಹಾಗೂ ಸಿರಿಧಾನ್ಯ ಮೇಳ ಕಾರ್ಯಕ್ರಮವನ್ನು ದಾವಣಗೆರೆಯಲ್ಲಿ ನಡೆಸುವುದಾಗಿ ತಿಳಿಸಿದರು. ಹಾಗೆಯೇ ನವಂಬರ್ 17ರಂದು ನೆಲಮಂಗಲದಲ್ಲಿ ವಿಭಾಗಿಯ ಸಮ್ಮೇಳನ, ನವೆಂಬರ್ 27ರಂದು ವಿಜಯಪುರದಲ್ಲಿ ಒಂದು ದಿನದ ವಿಭಾಗಿಯ ಮೂಲಿಕಾ ಉತ್ಸವ, ಡಿಸೆಂಬರ್ 3, 4 ಮತ್ತು 5 ರಂದು ಹಾಸನದಲ್ಲಿ ರಾಜ್ಯಮಟ್ಟದ ಪಾರಂಪರಿಕ ವೈದ್ಯ ಸಮ್ಮೇಳನ ಮತ್ತು ಮೂಲಿಕಾ ಉತ್ಸವ ನಡೆಸಲು ಸಿದ್ಧತೆಗಳು ನಡೆದಿರುವುದಾಗಿ ತಿಳಿಸಿದರು.

ಪರಿಷತ್ತಿನ ಕಾರ್ಯದರ್ಶಿ ವೈದ್ಯ ಉಮೇಶ್ ಸ್ವಾಗತಿಸಿದರು. ದಾವಣಗೆರೆ ವೈದ್ಯ ಪರಿಷತ್‌ನ ಕಾರ್ಯಾಧ್ಯಕ್ಷ ವೈದ್ಯ ಶಿವಮೂರ್ತಿ ಉಪಸ್ಥಿತರಿದ್ದರು.

## ಗಿಡಮೂಲಿಕೆ ಉತ್ರಾಣಿ



ದೀಪಾವಳಿ ಹಬ್ಬದ ಸಮಯದಲ್ಲಿ ಸಗಣಿ, ಸುಣ್ಣ, ಕೆಮ್ಮಣ್ಣಿನಲ್ಲಿ ಪಾಂಡವ-ಕೌರವರನ್ನು ಮಾಡಿ, ಅದಕ್ಕೆ ಉತ್ರಾಣಿ ಕಡ್ಡಿಗಳನ್ನು ಸಿಕ್ಕಿಸಿ ಮನೆಯ ಮುಂಬಾಗಿಲಿನಲ್ಲಿ ಇಡಲಾಗುತ್ತದೆ (ಕಾರಣ ಗೊತ್ತಿಲ್ಲ).

ಅನಾದಿ ಕಾಲದಿಂದಲೂ ನಮ್ಮ ಪೂರ್ವಿಕರು ಮನೆಮದ್ದಾಗಿ ಹೆಚ್ಚಾಗಿ ಬಳಸುತ್ತಾ ಬಂದಿರುವ ಗಿಡ ಉತ್ರಾಣಿಯನ್ನು ಖರಮಂಜರಿ, ಕಡ್ಡಿಗೊಡ, ಲತ್ ಜೀರಾ, ಅಘತ, ನಾರವಿ, ಅಪಾಮಾರ್ಗ ಎಂದೂ ಕರೆಯಲಾಗುತ್ತದೆ. ಉತ್ರಾಣಿಯ ಎಲ್ಲಾ ಭಾಗಗಳು ವೈದ್ಯಕೀಯ ಉಪಯೋಗಕ್ಕೆ ಬರುತ್ತವೆ.

ರಕ್ತ ಪ್ರಮೇಹ, ಶ್ವೇತಪ್ರದರ, ರಕ್ತ ಪ್ರದರ, ಪಾಂಡು ರೋಗ, ಮೊಳೆ ಮೂಲವ್ಯಾಧಿ, ರಕ್ತ ಮೂಲವ್ಯಾಧಿ, ಸನ್ನಿ, ಅತಿಸಾರ, ತದ್ದು, ಇಸುಬು ಮುಂತಾದ ಅಸಾಧಾರಣ ರೋಗಗಳಿಗೆ ಉತ್ರಾಣಿಯಲ್ಲಿ ಉತ್ತರವಿದೆ.

ಹಾಗೆ ಈ ಗಿಡದಲ್ಲಿ ವಿಷನಾಶಕ ಗುಣಗಳಿರುವುದರಿಂದ ಜರಿ, ಜೇನು, ಚೇಳು, ನಾಯಿ ಕಡಿದಾಗ ಗಾಯವನ್ನು ಸ್ವಚ್ಛವಾಗಿ ತೊಳೆದು ಎಲೆಗಳ ರಸ ಹಚ್ಚಬೇಕು. ಬೇರು ಮತ್ತು ಶ್ರೀಗಂಧ ತೇಯ್ದು ಜೇನು ತುಪ್ಪ ಸೇರಿಸಿ, ತಿಂದರೆ ವಿಷ ಪರಿಹಾರ ಆಗುತ್ತದೆ.

ಬಿಳಿ ಉತ್ರಾಣಿಯಲ್ಲಿ ಉಷ್ಣವೀರ್ಯ, ಪಾಚಕ, ಕಫ ನಿವಾರಣೆ ಗುಣಗಳು ಇರುವುದರಿಂದ ಇದನ್ನು ವಮನಕಾರಿ, ಮೂಲವ್ಯಾಧಿ, ಉರಿಮೂತ್ರ, ಬೇಧಿ, ಉದರ ರೋಗ, ನವೆ, ದದ್ದು, ಗಂತಿ, ವ್ರಣ ಸಮಸ್ಯೆಗಳಲ್ಲಿ ಉಪಯೋಗಿಸುತ್ತಾರೆ. ಇದು ರಕ್ತವನ್ನು ಶುದ್ಧೀಕರಿಸುತ್ತದೆ ಮತ್ತು ಕಿವುಡುತನ ಬಾರದಂತೆ ಸಹಾಯ ಮಾಡುತ್ತದೆ.

ಕೆಂಪು ಉತ್ರಾಣಿಯಲ್ಲಿ ಕಫ ವಾತನಾಶಕ ಗುಣಗಳಿರುವುದರಿಂದ ಬೇರಿನ ಭಸ್ಮದಿಂದ ನೆಗಡಿ, ಕೆಮ್ಮು ಕಡಿಮೆ ಆಗುತ್ತದೆ. ಹುಣ್ಣುಗಳನ್ನು ಕಡಿಮೆ ಮಾಡಿ, ಹೃದಯದ ತೊಂದರೆಗಳನ್ನು ದೂರವಿಟ್ಟು, ಅಸ್ತಮಾ, ಹೊಟ್ಟೆ ಉಬ್ಬರ ಸಮಸ್ಯೆಗಳನ್ನು ಕಡಿಮೆ ಮಾಡುತ್ತದೆ. ಇದನ್ನು ತಲೆಗೆ ಲೇಪಿಸಿಕೊಂಡರೆ ಹುಣ್ಣು, ಗಾಯ, ನವೆ, ಸಿಬ್ಬು ಮುಂತಾದ ಸಮಸ್ಯೆಗಳು ದೂರವಾಗುತ್ತವೆ.

ಉತ್ರಾಣಿ ಗಿಡದ ಬೇರನ್ನು ಚೆನ್ನಾಗಿ ನೀರಿನಲ್ಲಿ ತೊಳೆದು ಗಂಧದಂತೆ ತೇಯ್ದು ಹಾಲುಣಿಸುವ ತಾಯಂದಿರ ಸ್ತನಗಳಿಗೆ ಹಚ್ಚಿಕೊಂಡರೆ ಹಾಲಿನ ಉತ್ಪತ್ತಿ ಹೆಚ್ಚಾಗುತ್ತದೆ ಮತ್ತು ಮಗುವಿನ ಆರೋಗ್ಯ ಕೂಡ ಚೆನ್ನಾಗಿ ಇರುತ್ತದೆ. ಸುಟ್ಟ ಗಾಯಗಳಿಗೆ ಹಾಗೂ ಚರ್ಮವ್ಯಾಧಿಗಳಿಗೆ ದಿವ್ಯೌಷಧವಾಗಿದೆ. ಉತ್ತರಾಣಿಯ ಭಸ್ಮ, ಉಪ್ಪು ಹಾಗೂ ಸಾಸಿವೆ ಎಣ್ಣೆಯ ಲೇಹ್ಯದಿಂದ ಅಥವಾ ಉತ್ರಾಣಿ ಬೇರಿನಿಂದ ಹಲ್ಲುಗಳನ್ನು ಚೆನ್ನಾಗಿ ಉಜ್ಜಿದರೆ ಹಲ್ಲುಗಳ ತೊಂದರೆ ಇರುವುದಿಲ್ಲ. ಅಲ್ಲದೇ ಹಲ್ಲುಗಳು ಬಿಳಿಯಾಗಿ ಶುಭ್ರವಾಗಿ ಮತ್ತು ಗಟ್ಟಿಯಾಗುತ್ತವೆ ಹಾಗೂ ಬಾಯಿಯ ದುರ್ವಾಸನೆಯನ್ನು ಸಹ ಕಡಿಮೆ ಮಾಡುತ್ತದೆ.

ಉತ್ತರಾಣಿ ಎಲೆಗಳನ್ನು ಚೆನ್ನಾಗಿ ಅರೆದು ಅದಕ್ಕೆ ಸ್ವಲ್ಪ ಅರಿಶಿನ, ಶ್ರೀಗಂಧದ ಚೂರ್ಣ ಮತ್ತು ಮೊಸರನ್ನು ಹಾಕಿ ಮುಖಕ್ಕೆ ಹಚ್ಚಿಕೊಂಡು ಅರ್ಧ ಗಂಟೆ ನಂತರ ಕಡಲೆ ಹಿಟ್ಟಿನಿಂದ ಮುಖವನ್ನು ತೊಳೆದುಕೊಂಡರೆ, ಮುಖವು ಕಾಂತಿಯುತವಾಗಿ ಮೃದುವಾಗಿ ಮೊಡವೆಗಳು, ಗುಳ್ಳೆಗಳು ಮತ್ತು ಕಪ್ಪು ಕಲೆಗಳು ಹೋಗುತ್ತವೆ.

ಕೆಂಪು ಉತ್ತರಾಣಿ ರಸವನ್ನು ಉಗುರು ಬೆಚ್ಚಗಿನ ನೀರಿನಲ್ಲಿ ಹಾಕಿ ಕುಡಿದರೆ, ಗಾಯವಾದ ದೇಹದ ಭಾಗದಿಂದ ರಕ್ತ ಸೋರುವುದು ನಿಲ್ಲುತ್ತದೆ.

ಇದನ್ನು ಪಶುರೋಗದ ಚಿಕಿತ್ಸೆಯಲ್ಲೂ ವ್ಯಾಪಕವಾಗಿ ಬಳಸಲಾಗುತ್ತದೆ. ನಿದ್ರಾಹೀನತೆ ದೂರವಾಗುತ್ತದೆ.

ಖಾಲಿ ಹೊಟ್ಟೆಗೆ ಉತ್ರಾಣಿ ರಸ ಮತ್ತು ಬೆಲ್ಲ ಸೇವಿಸುವುದು ರಕ್ತಹೀನತೆಗೆ ಒಳ್ಳೆಯ ಮದ್ದಾಗಿದೆ. ಉತ್ತರಾಣಿಯ ಭಸ್ಮವನ್ನು ಬಟ್ಟೆ ತೊಳೆಯಲು ಮಾರ್ಜಕವಾಗಿಯೂ ಬಳಸಬಹುದು. ಆದರೆ, ಗರ್ಭಿಣಿ ಹೆಂಗಸರು ಇದರಿಂದ ದೂರವಿರುವುದು ಒಳ್ಳೆಯದು. ಗಿಡದ ಹತ್ತಿರ ಹೋಗುವುದೂ ಅಪಾಯ. ಉತ್ರಾಣಿಯ ಸೇವನೆಯಿಂದ ಗರ್ಭಪಾತವಾಗುವ ಸಾಧ್ಯತೆ ಹೆಚ್ಚು.

ಜಾಗ್ರತೆಯಾಗಿ, ನಾಟೀ ವೈದ್ಯರ ಸೂಕ್ತ ನಿರ್ದೇಶನದಂತೆ ಬಳಸಬೇಕು.

**- ಮಮತಾ ನಾಗರಾಜ್**
ಪಾರಂಪರಿಕ ವೈದ್ಯೆ, ದಾವಣಗೆರೆ.

## ಮಲೇಬೆನ್ನೂರು : ಗೋಪುರ ನಿರ್ಮಾಣಕ್ಕೆ ಡಾ.ವೀರೇಂದ್ರ ಹೆಗ್ಗಡೆ ನೆರವು



ಮಲೇಬೆನ್ನೂರು, ನ.4- ಹಿಂಡಸಘಟ್ಟ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಗೋಪುರ ನಿರ್ಮಾಣಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರು ಬಿಡುಗಡೆ ಮಾಡಿರುವ ಒಂದು ಲಕ್ಷ ರೂಗಳ ಡಿಡಿಯನ್ನು ತಾ. ಯೋಜನಾಧಿಕಾರಿ ವಸಂತ್ ದೇವಾಡಿಗ ಅವರು ದೇವಸ್ಥಾನ ಸಮಿತಿಯವರಿಗೆ ಹಸ್ತಾಂತರ ಮಾಡಿದರು.

ವಲಯದ ಮೇಲ್ವಿಚಾರಕರಾದ ಶಾರದಾ ಮತ್ತು ಒಕ್ಕೂಟದ ಪದಾಧಿಕಾರಿಗಳು ಈ ವೇಳೆ ಹಾಜರಿದ್ದರು.

## ವನಿತಾ ಸಾಹಿತ್ಯ ವೇದಿಕೆಯಿಂದ ಪ್ರಬಂಧ ಸ್ಪರ್ಧೆ : ಲೇಖನ ಆಹ್ವಾನ

ದಾವಣಗೆರೆ, ನ.4- ಜಿಲ್ಲಾ ವನಿತಾ ಸಾಹಿತ್ಯ ವೇದಿಕೆಯ ವಾರ್ಷಿಕೋತ್ಸವದ ಅಂಗವಾಗಿ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ.

'ಡಾ. ಎಚ್. ಗಿರಿಜಮ್ಮನವರ ಬದುಕು-ಬರಹ' ಕುರಿತಂತೆ ಎರಡರಿಂದ ಮೂರು ಪುಟಗಳ ಲೇಖನವನ್ನು ಸಿದ್ಧಪಡಿಸಿ, ಇದೇ ದಿನಾಂಕ 10 ರ ಒಳಗೆ ಕಳಿಸಬೇಕು. ಸ್ಪರ್ಧೆಯು 1. ವಿದ್ಯಾರ್ಥಿ ವಿಭಾಗ ಮತ್ತು 2. ಸಾರ್ವಜನಿಕ ವಿಭಾಗ. ಪ್ರತಿ ವಿಭಾಗದಿಂದ ಪ್ರಥಮ, ದ್ವಿತೀಯ ಮತ್ತು ತೃತೀಯ ಮೂರು ಬಹುಮಾನಗಳನ್ನು ಕೊಡಲಾಗುವುದು ಎಂದು ಶ್ರೀಮತಿ ಮಲ್ಲಮ್ಮ ನಾಗರಾಜ್ (ಮೊ : 99801 48289) ತಿಳಿಸಿದ್ದಾರೆ.

ಲೇಖನಗಳನ್ನು ಕಳಿಸಬೇಕಾದ ವಿಳಾಸ : ಶ್ರೀಮತಿ ಮಲ್ಲಮ್ಮ ನಾಗರಾಜ್, ಮಾಂಟೆಸ್ಸರಿ ಕಾನ್ವೆಂಟ್, ತ್ರಿಶೂಲ್ ಟಾಕೀಸ್ ಹಿಂಭಾಗ, # 116/102, ಕಿರವಾಡಿ ಲೇಔಟ್, ದಾವಣಗೆರೆ ಇವರಿಗೆ ಕಳುಹಿಸತಕ್ಕದ್ದು.


**ಸೈಟ್ ಮಾರಾಟಕ್ಕಿದೆ**
K.H.B Layout Bungolw
ಸೈಟ್ 5,300 SQFT
ಉತ್ತರ- ಪಶ್ಚಿಮ ಕಾರ್ನರ್
86181 82332

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ದಾವಣಗೆರೆ ನಗರ ಹಾಗೂ ಸುತ್ತ ಸೈಟುಗಳು ಹಾಗೂ ಮನೆಗಳು ಮಾರಾಟಕ್ಕಿವೆ. (20×30, 30×40, 30×50, 40×60). ಸಂಪರ್ಕಿಸಿ
97432 09680, 83101 50590

**ಮನೆ ಮಾರಾಟಕ್ಕಿದೆ**
